ಆಗಿ ಯುಗಾದಿ ಹಬ್ಬಕ್ಕೂ ಕೂಡ ವ್ಯವಸ್ಥಿತವಾಗಿ ನೀರು ಕೊಡಲಿಕ್ಕೆ ಬಹಳ ತೊಂದರೆಯಾದ ಕಾರಣದಿಂದ ಆ ಒಂದು ವಿದ್ಯುತ್ ಸಂಪರ್ಕವನ್ನು ಊಟ್ಗಳ್ಳಿ ಮಾರ್ಗದಿಂದ ಕೊಡಬೇಕೆಂದು ಮತ್ತು ವೋಲ್ಟೇಜಿನ ವ್ಯತ್ಯಾಸವನ್ನು ಕೂಡ ಸರಿಪಡಿಸಿಕೊಡಬೇಕೆಂದು ಹೇಳಿ ನಾನು ತಮ್ಮೂಲಕ ಮಾನ್ಯ ವಿದ್ಯುತ್ ಮಂತ್ರಿಗಳನ್ನು ಕೋರುತ್ತೇನೆ.

ಶ್ರೀ ವೀರಕುಮಾರ್ ಎ. ಪಾಟೀಲ್ (ಮಾನ್ಯ ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೇ, ನಮ್ಮ ಸನ್ಮಾನ್ಯ ಶಾಸಕರು ಏನು ಹೇಳಿದ್ದಾರೋ ಅದು ನಿಜ ಇದೆ. ಸ್ವಲ್ಪ ಪ್ರಾಬ್ಲಂ ಆಗಿತ್ತು. ಅಲ್ಲಿ 66 ಕೆ.ವಿ.ಎ. ಬ್ರೇಕರ್ ಫೇಲ್ ಆಗಿತ್ತು. ಈಗ ಅದನ್ನು ಸರಿಪಡಿಸಿದ್ದೇವೆ. ನೀರು ಸರಬರಾಜು ಕೂಡ ಸರಿಯಾಗಿ ಆಗುತ್ತಿದೆ.

7. ಶಾಸನ ರಚನೆ

(ಅ) ವಿಧೇಯಕ ಮಂಡನೆ

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ(ತಿದ್ದುಪಡಿ) ವಿಧೇಯಕ, 2001

:ಮಂಡನೆಗೆ ಅನುಮತಿ ಕೋರಿಕೆ:

ಶ್ರೀ ಆರ್.ಬಿ. ತಿಮ್ಮಾಪುರ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, 2001ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ: "2001ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಆರ್.ಬಿ. ತಿಮ್ಮಾಪುರ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, 2001ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : *ವಿಧೇಯಕವನ್ನು ಮಂಡಿಸಲಾಗಿದೆ.*

ಆ) ಪರ್ಯಾಲೋಚನ ಪ್ರಸ್ತಾವ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು

ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ತಿದ್ದುಪಡಿ) ವಿಧೇಯಕ, 2001.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಶಿವಣ್ಣ (ಮಾನ್ಯ ಹಣಕಾಸು ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ 2001ನೇ ಸಾಲಿನ ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

*ಅನುಬಂಧ (i)

ಶ್ರೀ ಎಸ್. ಸುರೇಶ್‌ಕುಮಾರ್ : ವಿಧೇಯಕದ ಡೀಟೆಲ್ಸ್ ಏನೆಂದು ಸ್ವಲ್ಪ ಮಾನ್ಯ ಮಂತ್ರಿಗಳು ಹೇಳಲಿ.

ಶ್ರೀ ಎಂ. ಶಿವಣ್ಣ (ಮಾನ್ಯ ಹಣಕಾಸು ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಗುಟ್ಕಾ ಅಡಿಕೆ ಮತ್ತು ತಂಬಾಕು ಮತ್ತಿತರೆ ವಸ್ತುಗಳಿಂದ ತಯಾರಿಸುವಂಥ ಒಂದು ವಸ್ತು. ಇದರ ಮೇಲೆ ಶೇಕಡ 16ರಷ್ಟು ಮಾರಾಟ ತೆರಿಗೆ ಮತ್ತು 4ರಷ್ಟು ಈ ವಿಲಾಸ ತೆರಿಗೆಯನ್ನು ಅದರ ಮೇಲೆ ಹಾಕಿ ಶೇಕಡ 20ರಷ್ಟು ತೆರಿಗೆಯನ್ನು ವಸೂಲು ಮಾಡುವುದು ಇತ್ತು. ಆದರೆ ಆಂಧ್ರ ಪ್ರದೇಶದಲ್ಲಿ ಇರುವ ಮೆಷರ್ಸ್ ಕೊಠಾರಿ ಪ್ಯಾಡಕ್ಟ್ಸ್‌ನವರು ಸುಪ್ರೀಂ ಕೋರ್ಟಿನಲ್ಲಿ ಒಂದು ದಾವೆಯನ್ನು ಹೂಡಿ ಈ ತಂಬಾಕು ಎನ್ನುವ ವಸ್ತು ಕೇಂದ್ರ ಸರ್ಕಾರದ ಆಬ್ಕಾರಿ ನೀತಿಯಲ್ಲಿ ಬರುವುದರಿಂದ ಇದರ ಮೇಲೆ ಒಂದು ಮಾರಾಟ ತೆರಿಗೆಯನ್ನು ಹಾಕಲು ಬರುವುದಿಲ್ಲ ಎಂದು ಹೇಳಿ ಅಲ್ಲಿ ಸುಪ್ರೀಂ ಕೋರ್ಟಿನಲ್ಲಿ ದಾವೆಯನ್ನು ಹೂಡಿದ ಮೇಲೆ ಅದಕ್ಕೆ ಸುಪ್ರೀಂ ಕೋರ್ಟ್‌ನವರು ತೀರ್ಪನ್ನು ನೀಡಿ ಮಾರಾಟ ತೆರಿಗೆ ಹಾಕುವುದಕ್ಕೆ ಬರುವುದಿಲ್ಲ ಎಂದು ತೀರ್ಪನ್ನು ನೀಡಿದ ಮೇಲೆ ಇವರಿಂದ ಬಹುಶಃ ನಮ್ಮ ರಾಜ್ಯಕ್ಕೂ ಕೂಡ ಈ ತೀರ್ಪು ಅನ್ವಯವಾಗುವ ರೀತಿಯಲ್ಲಿ ಆಯಿತು. ಈ ರೀತಿ ಅನ್ವಯವಾಗುವುದರಿಂದ ಸುಮಾರು 30 ಕೋಟಿ ರೂಪಾಯಿಗಳಷ್ಟು ತೆರಿಗೆ ನಮಗೆ ಬರತಕ್ಕದ್ದು ನಷ್ಟವಾಗುತ್ತದೆ ಎಂದು ಕುಡುಬಂದಿದ್ದರಿಂದ ಮಾರಾಟ ತೆರಿಗೆ ಎನ್ನುವ ಬದಲಾಗಿ ಅದನ್ನು ಲಕ್ಸುರಿ ಟ್ಯಾಕ್ಸ್ ಎಂದು ಹೇಳಿ ಮಾಡುತ್ತಿದ್ದೇವೆ. ಹೆಸರು ಬದಲಾವಣೆ ಒಂದೇ. ಕಲೆಕ್ಟ್ ಮಾಡತಕ್ಕದ್ದು ಒಂದೇ. 20 ಭಾಗ ವಿಲಾಸ ತೆರಿಗೆಯನ್ನು ಕಲೆಕ್ಟ್ ಮಾಡುವುದರಿಂದ ಇದು ರಾಜ್ಯದ ಬೊಕ್ಕಸಕ್ಕೂ ಕೂಡ ಅನುಕೂಲವಾಗುತ್ತೇ ಎಂದು ಹೇಳಿ ಇದನ್ನು ಈಗಾಗಲೇ ಆರ್ಡಿನೆನ್ಸ್ ಮೂಲಕವಾಗಿ ಜಾರಿಗೆ ಕೊಟ್ಟಿದೆ. ಹಾಗಾಗಿ ಈ ಸದನ ಇದನ್ನು ಪಾಸು ಮಾಡಿಕೊಡಬೇಕೆಂದು ಹೇಳಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

+ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಈ ವಿಧೇಯಕಕ್ಕೆ ಆರ್ಡಿನೆನ್ಸ್ ಅಗತ್ಯವೇನಿತ್ತೋ ನನಗಂತೂ ಗೊತ್ತಿಲ್ಲ. ಅಷ್ಟು ತುರ್ತು ಆಗತ್ಯ ಏನಿತ್ತು ಎಂದು ಈ ವಿಧೇಯಕವನ್ನು ಪೂರ್ತಿ ಓದಿದಾಗ ಉದ್ದೇಶಗಳು, ಕಾರಣಗಳು, ಹೇಳಿಕೆಗಳನ್ನು ನೋಡಿದಾಗ ಗೊತ್ತಾಗುವುದಿಲ್ಲ. ಇದನ್ನು ತಾವು ಸ್ವಾಭಾವಿಕವಾಗಿಯೇ ತರಬಹುದಾಗಿತ್ತು. ಇದು ಮೊದಲ ಪ್ರಶ್ನೆ. ಎರಡನೆಯ ಪ್ರಶ್ನೆ, ಸರ್ಕಾರದ ನೀತಿಯೇನು? ಸರ್ಕಾರದ ಸಿದ್ಧಾಂತವೇನು? ಹಿಂದೆ ಇವರ ಸರ್ಕಾರವಿದ್ದಾಗ ಡಾಕ್ಟರ್ ನರಸಿಂಹಯ್ಯನವರ ನೇತೃತ್ವದಲ್ಲಿ ಗುಟ್ಕಾ ಸೇವನೆ ಬಗ್ಗೆ ಒಂದು ಸಮಿತಿಯನ್ನು ರಚಿಸಿದ್ದರು. ಗುಟ್ಕಾ ಸೇವನೆ ಬಗ್ಗೆ

ಅದರಿಂದ ಸಮಾಜದ ಮೇಲೆ ಮತ್ತು ಯುವ ಜನಾಂಗದ ಮೇಲೆ ಆಗುವ ದುಷ್ಪರಿಣಾಮಗಳು ಕುರಿತು ಅಧ್ಯಯನ ಮಾಡಿ ಒಂದು ವರದಿಯನ್ನು ಕೊಡಲಿಕ್ಕೋಸ್ಕರ ಡಾಕ್ಟರ್ ನರಸಿಂಹಯ್ಯನವರು ಒಂದು ಸಮಿತಿಯನ್ನು ರಚಿಸಿದ್ದರು. ನರಸಿಂಹಯ್ಯನವರ ಸಮಿತಿ ವರದಿಯನ್ನು ಕೊಟ್ಟಿದೆ. ವರದಿಯಲ್ಲಿ ಬಹಳಷ್ಟು ಸ್ಪಷ್ಟವಾಗಿ ಹೇಳಿದೆ. ಗುಟ್ಕಾ ಮೇಲೆ ನಿಷೇಧ ತರಬೇಕೆಂದು. ಗುಟ್ಕಾ ಸಮಾಜಕ್ಕೆ ಆತಂಕಕಾರಿಯದ ಒಂದು ವಸ್ತು. ಗುಟ್ಕಾ ಸಮಾಜದ ಆರೋಗ್ಯಕ್ಕೆ ಮಾರಕವಾದ ವಸ್ತು ಎಂದು ಹೇಳಿ ಬಹಳ ಸ್ಪಷ್ಟವಾದ ಒಂದು ವರದಿಯನ್ನು ಕೊಟ್ಟಿದೆ. ಇಲ್ಲಿ ನಿಮ್ಮ ಒಂದು ಆದಾಯವನ್ನು ಜಾಸ್ತಿ ಮಾಡುವುದಕ್ಕೋಸ್ಕರ ಎಂದು ನೀವು ಹೇಳುತ್ತೀರಿ, ಈಗ ಶೇಕಡ 4ರಷ್ಟು ಪ್ರವೇಶ ತೆರಿಗೆ ಹೆಚ್ಚುವರಿಯಾಗಿ ಭೋಗ ವಸ್ತು ತೆರಿಗೆ ದರವನ್ನು 4 ರಿಂದ 20 ಕ್ಕೆ ಹೆಚ್ಚಿಸುವುದು ಅವಶ್ಯಕವೆಂದು ಹೇಳಿದ್ದೀರಿ. ಅಂದರೆ ಸಮಾಜ ಹಾಳಾದರೂ ಪರವಾಗಿಲ್ಲ. ಯುವ ಜನಾಂಗದವರು ಅದಕ್ಕೆ ಕಟ್ಟುಬಿದ್ದು ಅವರ ಆರೋಗ್ಯವನ್ನು ಹಾಳು ಮಾಡಿಕೊಂಡರೂ ಪರವಾಗಿಲ್ಲ. ನಮ್ಮ ಆದಾಯ ಜಾಸ್ತಿಯಾದರೆ ಸಾಕು, ಎಂದು ಹೇಳಿದರೆ ಇದು ಸರ್ಕಾರದ ನಿಲುವೇನು? ಹಿರಿಯ ಸಚಿವರು ತಾವು ಅಲ್ಲಿ ಕುಳಿತಿದ್ದೀರಿ. ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಕೇಳಿಕೊಳ್ಳುವುದು ಏನೆಂದರೆ ದಯವಿಟ್ಟು ಸಮಾಜಕ್ಕೆ ಅನಾರೋಗ್ಯಕರವಾದ ವಿಷಯಗಳ ಮೇಲೆ ಟ್ಯಾಕ್ಸೇನೊ ಜಾಸ್ತಿ ಮಾಡುತ್ತೇವೆ, ಅದರಿಂದ ಶ್ರೀಮಂತರಾಗುತ್ತೇವೆ ಎನ್ನುವುದನ್ನು ಬಿಟ್ಟು ಇಂಥ ವಿಷಯದ ಮೇಲೆ ಕಟ್ಟುನಿಟ್ಟಾಗಿ ನಾವು ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಜಿಲ್ಲೆಗೆ ಒಂದೊಂದು ಕಿದ್ವಾಯಿ ಆಸ್ಪತ್ರೆಯನ್ನು ಶುರುಮಾಡಬೇಕಾಗುತ್ತದೆ. ಇದು ಸರ್ಕಾರಕ್ಕೆ ಬೇಕಾದ ವಿಚಾರವೇ? ಇದರ ಬಗ್ಗೆ ನಾವು ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ಚಿಂತನೆ ನಡೆಸಬೇಕೇ ವಿನಃ ನಾವೇನೊ ಭೋಗ ವಸ್ತುಗಳ ಮೇಲೆ ತೆರಿಗೆ ತರುತ್ತೇವೆ, ತಿದ್ದುಪಡಿ ತರುತ್ತೇವೆ, ಆರ್ಡಿನೆನ್ಸ್ ತರುತ್ತೇವೆ, ಅದನ್ನು ಅನುಮೋದಿಸಿದರೆ ಇನ್ನಷ್ಟು ಜಾಸ್ತಿ ಆದಾಯವನ್ನು ಮಾಡಿಕೊಳ್ಳುವುದು, ಇದು ಯಾವುದೇ ಒಂದು ಜನಪರ ಸರ್ಕಾರಕ್ಕೆ, ಯಾವುದೇ ಒಂದು ನಾಗರೀಕ ಸರ್ಕಾರಕ್ಕೆ ಶೋಭೆ ತರುವ ವಿಚಾರವಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

+ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಅಧ್ಯಕ್ಷರೇ, ನಾನು ಕೂಡ ಈ ತಿದ್ದುಪಡಿಯನ್ನು ವಿರೋಧಿಸಿ ಗುಟ್ಕಾ ಎಂದು ಏನು ಕರೆಯುತ್ತೇವೆ, ಅದನ್ನು ತಂಬಾಕು ಹಾಕಿ ಮಾಡತಕ್ಕದ್ದು. ಇದರಲ್ಲಿ ಕೇಂದ್ರ ಸರ್ಕಾರ ಅವರಿಗೆ ವಿನಾಯಿತಿಯನ್ನು ಕೊಟ್ಟಿದೆ ಮಾರಾಟ ತೆರಿಗೆಯಿಂದ ಎಂದು ಹೇಳಿ ಅದಕ್ಕೆ ಬದಲಿ ವ್ಯವಸ್ಥೆ ಇವತ್ತು ಭೋಗ ವಸ್ತು ತೆರಿಗೆ ಎಂದು ಹೇಳಿ 4 ಪರ್‌ಸೆಂಟ್‌ನಿಂದ 20 ಪರ್‌ಸೆಂಟ್‌ಗೆ ಹೆಚ್ಚಿಸುವಂಥ ಒಂದು ಕಾರ್ಯವನ್ನು ಮಾಡಿರುವುದು. ಇದನ್ನು ನಿಷೇಧಿಸಬೇಕು. ಗುಟ್ಕಾವನ್ನು ಉಪಯೋಗಿಸತಕ್ಕದ್ದನ್ನು ರಾಜ್ಯದಲ್ಲಿ ಸಂಪೂರ್ಣವಾಗಿ ತೆಗೆಯಬೇಕೆಂದು ಹೇಳಿ ಮಾನ್ಯ ಸಚಿವರಿಗೆ ಹೇಳುತ್ತೇನೆ. 30 ಕೋಟಿ ರೂಪಾಯಿ ಬರುತ್ತದೆ ಎಂದು ಹೇಳಿ ಗುಟ್ಕಾ ತೆಗೆದುಕೊಳ್ಳಿ. ಇಲ್ಲಿ ನಮ್ಮ ಸುರೇಶ್‌ಕುಮಾರ್‌ರವರ ಕಡೆ ಒಂದು ವಾದ ಇರುತ್ತದೆ. ವಿಶ್ವೇಶ್ವರ ಹೆಗಡೆ, ಅಥವಾ ಕಾಗೋಡು ತಿಮ್ಮಪ್ಪನವರು ಮತ್ತು ಅರಗ ಜ್ಞಾನೇಂದ್ರರವರಲ್ಲಿ ಒಂದು ವಾದ ಇರುತ್ತದೆ. ಅಡಿಕೆ ಬೆಳೆಯುವವರಿಗೆ ಅಡಿಕೆ ಚಿಂತೆ. ಇದರಲ್ಲಿ ಅಡಿಕೆಯನ್ನೂ ಸೇರಿಸಿ ತಂಬಾಕನ್ನು ಹಾಕಿ ಮಸಾಲೆ ಕೊಟ್ಟು ಅದು ಸ್ಪಿರಿಟ್ ಬರುವ ಹಾಗೆ ಮಾಡುತ್ತಾರೆ. ಆಲ್ಕೊಹಾಲ್ ತೆಗೆದುಕೊಂಡರೆ ಒಂದು ರೀತಿಯಾಗುತ್ತದೆ.

ಗುಟ್ಕಾ ತೆಗೆದುಕೊಂಡರೆ ಒಂದು ರೀತಿಯಾಗುತ್ತದೆ. ತಂಬಾಕು ತೆಗೆದುಕೊಂಡರೆ ಒಂದು ರೀತಿ. ಕಡ್ಡಿಪುಡಿ ಹಾಕುವುದು, ಹೊಗೆಸೊಪ್ಪು ಹಾಕುವುದು ಇವೆಲ್ಲಾ ನಮ್ಮ ಕಡೆ ಇದೆ. ಹಾಗೆಯೇ ಗುಟ್ಕಾವನ್ನು ನಿಷೇಧ ಮಾಡಿ ಇದನ್ನು ತೆಗೆಯತಕ್ಕ ಕಾರ್ಯ ರಾಷ್ಟ್ರದಲ್ಲಿ ಎಲ್ಲಿ ಆಗಿದೆಯೋ ನನಗೆ ಗೊತ್ತಿಲ್ಲ. ಆ ಕಾರ್ಯನಮ್ಮಿಂದಲೇ ಪ್ರಾರಂಭವಾಗಬೇಕು. ನಿನ್ನೆ ತಾನೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನ್ನು ಮಂಡಿಸಿದರು. ಬೇರೆ ವಿಧಾನದಲ್ಲಿ ಆ 30 ಕೋಟಿ ರೂಪಾಯಿಗಳನ್ನು ತುಂಬುವುದನ್ನು ಮಾಡಿ ಸಂಪೂರ್ಣ ಪ್ರವೇಶವನ್ನು ಈ ಗುಟ್ಕಾಗೆ ರದ್ದು ಮಾಡಿದರೆ ಅದು ಉತ್ತಮವಾದ ಪರಿಣಾಮವಾಗುತ್ತಿತ್ತು. ಇವತ್ತು ಸಿಗರೇಟಿನ ಮೇಲೆ "Smoking is injurious to health." ಎಂದು ಸೀಲ್ ಹಾಕಿ ಸಿಗರೇಟನ್ನು ಮಾರಾಟ ಮಾಡುತ್ತಾರೆ. ಅದು ಕೋಟ್ಯಾಂತರ ರೂಪಾಯಿ ರೆವಿನ್ಯೂವನ್ನು ತರುತ್ತದೆ ಎಂದು ಹೇಳಿ ಆ ಉದ್ದೇಶದಿಂದ ಸಿಗರೇಟನ್ನು ಸೇದಿರಿ ಎನ್ನುವುದಾಗಿದೆ. ಇವತ್ತು ಆಲ್ಕೋಹಾಲನ್ನು ಡಿಸ್ಕರೇಜ್ ಮಾಡಬೇಕೆಂದು ಹೇಳಿ ಹೆಚ್ಚೆಚ್ಚು ತೆರಿಗೆಗಳನ್ನು ಅದರ ಮೇಲೆ ಹಾಕಿ; ಆಲ್ಕೋಹಾಲ್ ಕುಡಿಯಬಾರದು ಎಂದು ಮಾಡಿದರೆ ಅದಕ್ಕಿಂತ ಕೆಳಗೇ ಇರತಕ್ಕ ಸೂಪಿರಿಯಸ್ ಆಲ್ಕೋಹಾಲ್- ಅಂದರೆ ಭಟ್ಟಿ ಸಾರಾಯಿ ಇತರ ಶರಾಬುಗಳನ್ನು ಕುಡಿಯುವಂಥಾದ್ದು ಆಗಿದೆ. ಹಾಗೆ ಇವತ್ತು ಮಾನ್ಯ ಸಚಿವರು ಹೇಳುವಂತಹದ್ದು, ಆಗಿದೆ. ಆದ್ದರಿಂದ ಗುಟ್ಕಾವನ್ನು ಸಂಪೂರ್ಣವಾಗಿ ನಿಷೇಧ ಮಾಡಿದೆ ಎಂದು ಈ ಸಂದರ್ಭದಲ್ಲಿ ಘೋಷಣೆ ಮಾಡಬೇಕು. ಮುಂದೆ ಈ ರಾಜ್ಯದಲ್ಲಿ 30 ಕೋಟಿ ರೂಪಾಯಿ ಆಲ್ಟರ್‌ನೇಟೀವ್ ಆಗಿ ಆದಾಯ ತರಲು ಇವತ್ತು ಭೋಗವಸ್ತು ಎಂದು ಮಾಡಿದ್ದಾರೆ ಈ ಸಮಯದಲ್ಲಿ 30 ಕೋಟಿ ರೂಪಾಯಿ ಬರುತ್ತದೆ ಎನ್ನುವ ಉದ್ದೇಶದಿಂದ ಇದನ್ನು ಇವತ್ತು ಲಕ್ಸುರಿ ಐಟಂ ಎಂದು ತೆರಿಗೆ ಹಾಕಿ, ಆ ತೆರಿಗೆಯನ್ನು ತುಂಬುವುದಕ್ಕೆ ಬೇರೆ ಮಾರ್ಗವನ್ನು ಅನುಸರಣೆ ಮಾಡಿರತಕ್ಕದ್ದು ತಪ್ಪು. ಈ ವಿಧೇಯಕವನ್ನು ದಯಮಾಡಿ ಸರ್ಕಾರ ವಾಪಸ್ ಪಡೆದು ಗುಟ್ಕಾವನ್ನು ಸಂಪೂರ್ಣ ನಿಷೇಧ ಮಾಡಬೇಕು ಎಂದು ಹೇಳುತ್ತೇನೆ.

+ಶ್ರೀ ಸಿ. ಬೈರೇಗೌಡ (ವೇಮಗಲ್) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಮನುಷ್ಯರಿಗೆ ಮತ್ತು ಬರತಕ್ಕಂಥಹ ವಸ್ತುಗಳು ಸಾಕಷ್ಟು ಇದ್ದಾವೆ. ಇವೆಲ್ಲವೂ ಸಾಮಾನ್ಯವಾಗಿ ಕೃಷಿ ಮೂಲದ ವಸ್ತುಗಳು. ಮಾನ್ಯ ಸುರೇಶ್ ಕುಮಾರ್ ಅವರು ಹೇಳಿದ ಹಾಗೆ ಮೂಲಕ್ಕಿಂತ ಹೊರತಾಗಿರತಕ್ಕಂಥವೂ ಸಹ ಕೆಲವು ಮತ್ತು ಭರಿಸತಕ್ಕಂಥದ್ದು ಇದೆ, ಅದು ಅಧಿಕಾರ ಎಂದು ಹೇಳುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸೈಂಟಿಸ್ಟ್ಸ್ ಹೇಳುತ್ತಾರೆ, Even food also causes intoxication ಚೆನ್ನಾಗಿ ಊಟ ಮಾಡಿದರು ಎಂದರೆ ಮನುಷ್ಯ ತೂಕಡಿಸುತ್ತಿರುತ್ತಾನೆ.

ಅಧ್ಯಕ್ಷರು : ಅದರಲ್ಲಿಯೂ ನಾನ್ ವೆಜಿಟೇರಿಯನ್ ಫುಡ್ ಪುನಃ ಮತ್ತೇರುವುದು ಜಾಸ್ತಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದು ಅನುಭವದ ಮಾತು. ಊಟದಲ್ಲೂ ಕೂಡ ಮತ್ತು ಇದೆ. ಚೆನ್ನಾಗಿ ಊಟ ಮಾಡಿದರು ಎಂದರೆ ನಿದ್ರೆ ಬರುತ್ತದೆ, ಕಣ್ಣು ಮುಚ್ಚುತ್ತಿರುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಅದಕ್ಕೆ ಉತ್ತರ ಆಗತ್ಯ ಕೆಲವರಿಗೆ ಇಲ್ಲ. ಕೆಲವರ ಭಾಷಣವೂ ಚೆನ್ನಾಗಿರುತ್ತದೆ. ನಿದ್ರೆಗೆ ಸೂಕ್ತವಾದಂತಹ ಭಾಷಣಗಳನ್ನು ನಾವಿಲ್ಲಿ ಕೇಳುತ್ತಿರುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಭಾಷಣ ಕೇಳಿಕೊಂಡು ಇಲ್ಲಿ ಕುಳಿತುಕೊಳ್ಳಬೇಕು. ಅವರು ಆ ಕಡೆ ಭಾಷಣವನ್ನು ಕೇಳಿಕೊಂಡು ಕುಳಿತುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ : ಅನೇಕ ವಸ್ತುಗಳು ಕೃಷಿ ಮೂಲದಿಂದ ಬರುತ್ತವೆ. ಈಗ ಅಡಿಕೆ ನಮ್ಮ ರಾಜ್ಯದಲ್ಲಿ ಒಂದು ಪ್ರಮುಖವಾದಂತಹ ವಾಣಿಜ್ಯ ಬೆಳೆ. ಅಡಿಕೆಯ ಜೊತೆಗೆ ಹೊಗೆ ಸೊಪ್ಪು ಕೂಡ ಅಷ್ಟೇ ಪ್ರಾಮುಖ್ಯವಾದಂತಹ ಬೆಳೆ. ಐದಾರು ಜಿಲ್ಲೆಗಳಲ್ಲಿ ಮುಖ್ಯವಾಗಿ ಮೈಸೂರು ಹಾಸನ, ಚಿಕ್ಕಮಗಳೂರು ಮತ್ತು ಬೆಳಗಾವಿ ಇಂತಹ ಜಿಲ್ಲೆಗಳಲ್ಲಿ ಹೆಚ್ಚಿಗೆ ಹೊಗೆಸೊಪ್ಪನ್ನು ಹೆಚ್ಚಿಗೆ ಬೆಳೆಯತಕ್ಕಂಥಹ ಜನರು ಇದ್ದಾರೆ. ಈ ಎರಡನ್ನೂ ಕೂಡ ಮಿಶ್ರಣ ಮಾಡುತ್ತಾರೆ. ಯಾವ ದಾಮಾಶ ಪ್ರಕಾರ ಮಿಶ್ರಣ ಮಾಡುತ್ತಾರೋ ಗೊತ್ತಿಲ್ಲ. ಅಡಿಕೆ ಮತ್ತು ಹೊಗೆಸೊಪ್ಪು ಸುಣ್ಣವನ್ನು ಹಾಕಿ ಗುಟ್ಕಾ ತಯಾರು ಮಾಡುತ್ತಾರೆ. ಇವೆಲ್ಲವುಗಳ ಮಿಶ್ರಣ ಆಗುತ್ತದೆ. ಈಗಾಗಲೇ ಮಾನ್ಯ ಸುರೇಶ್ ಕುಮಾರ್ ಅವರು ಹೇಳುತ್ತಿದ್ದರು. ಇದರ ಸೇವನೆಯಿಂದ ಇವತ್ತಿನ ದಿವಸ ಅನೇಕ ರೋಗ ರುಜಿನಗಳು, ಅದರಲ್ಲೂ ಮುಖ್ಯವಾಗಿ ಕ್ಯಾನ್ಸರ್ ಎಂಬುತಕ್ಕಂಥಹ ರೋಗ ವಿಶೇಷವಾಗಿ ಬರುತ್ತದೆ ಎಂದು ಹೇಳಿದರು. ವೈಜ್ಞಾನಿಕವಾಗಿ ಸಹ ಇದು ಸಾಬೀತಾಗಿದೆ. ಹೆಚ್ಚು ಕ್ಯಾನ್ಸರ್ ಇರತಕ್ಕಂಥಹ ರೋಗಿಗಳಲ್ಲಿ ಕಾರಣ ಹುಡುಕಿದಾಗ ಅವರು ಈ ಹೊಗೆಸೊಪ್ಪಿನ ಪ್ರಭಾವದಿಂದ ಕ್ಯಾನ್ಸರ್ ಬರತಕ್ಕಂಥಹ ಘಟನೆ ಹೆಚ್ಚು ಇರುತ್ತದೆ ಎಂದು ವೈಜ್ಞಾನಿಕವಾಗಿ ಸಹ ಸಾಬೀತಾಗಿದೆ. ಬೇರೆ ಬೇರೆ ಕಾರಣಗಳಿಂದಲೂ ಕ್ಯಾನ್ಸರ್ ಬರತಕ್ಕದ್ದು ಇದೆ. ಏನೂ ಕಾರಣ ಇಲ್ಲದೆಯೂ ಕ್ಯಾನ್ಸರ್ ಬರುವುದಕ್ಕೆ ಸಾಧ್ಯವಿದೆ. ಕೆಲವರಿಗೆ ಅವರ ಜೀವಮಾನದಲ್ಲಿಯೇ ಬೀಡಿ ಮುಟ್ಟಿರುವುದಿಲ್ಲ, ಸಿಗರೇಟ್ ಮುಟ್ಟಿರುವುದಿಲ್ಲ, ಎಲೆ ಅಡಿಕೆ ಮುಟ್ಟಿರುವುದಿಲ್ಲ. ಆದರೂ ಕೂಡ ಕೆಲವರಿಗೆ ಕ್ಯಾನ್ಸರ್ ಬಂದಿರತಕ್ಕುಥ ಸಂದರ್ಭಗಳು ಕೂಡ ಇದ್ದಾವೆ. ಆದರೆ ಈ ಹೊಗೆಸೊಪ್ಪಿನ ಪ್ರಭಾವದಿಂದ ಕ್ಯಾನ್ಸರ್ ಬಂದಿರತಕ್ಕದ್ದು ಹೆಚ್ಚಿಗೆ ಇದೆ ಎಂಬುದು ವಿಶ್ಲೇಷಣೆಯಿಂದ ಇವತ್ತು ಪ್ರಪಂಚದಾದ್ಯಂತ ಸಾಬೀತಾಗಿರತಕ್ಕದ್ದು. ಆದ್ದರಿಂದ ಕೆಲವು ಉತ್ಪನ್ನಗಳ ಮೇಲೆ ಮುಖ್ಯವಾಗಿ ಸಿಗರೇಟಿನ ಮೇಲೆ ಒಂದು ಸ್ವಾಚ್ಛುಟರಿ ವಾರ್ನಿಂಗ್ ಹಾಕುತ್ತಾರೆ. Smoking is injurious to health. ಎನ್ನತಕ್ಕದ್ದು. ಆದರೆ ಇತರ ಉತ್ಪನ್ನಗಳಲ್ಲಿ, ಅದೇ ಹೊಗೆಸೊಪ್ಪಿಗೆ ಸಂಬಂಧಪಟ್ಟಂತಹ ಇತರ ಉತ್ಪನ್ನಗಳು ಏನೇನು ಇದ್ದಾವೆ, ಅದರ ಮೇಲೆ ಈ ರೀತಿಯಾದಂತಹ ಸ್ವಾಚ್ಛುಟರಿ ವಾರ್ನಿಂಗ್ ಆಗಲೀ ಮತ್ತೊಂದಾಗಲೀ ಇಲ್ಲ. ಯಾರು ಎಷ್ಟು ಬೇಕಾದರೂ ಬೀಡಿಯನ್ನೂ ಸೇದಬಹುದು, ನಮ್ಮ ಮಾನ್ಯ ಬಚ್ಚೇಗೌಡರು ಹೇಳಿದ ಹಾಗೆ ಕಡ್ಡಿ ಪುಡಿ, ಟೊಬ್ಯಾಕೋದಲ್ಲಿ ಚ್ಯೂಯಿಂಗ್ ಟೊಬ್ಯಾಕೋ ಮತ್ತು ಚುಟ್ಟಾ ಯಾರು ಎಷ್ಟು ಬೇಕಾದರೂ ಕೂಡ ಬಳಸುವಂತಹ ಪರಿಸ್ಥಿತಿ ಇದೆ. ಇದು ಆಗಲೇ ನಾನು ಹೇಳಿದ ಹಾಗೆ ಈ ಹೊಗೆಸೊಪ್ಪು ಒಂದು ಮುಖ್ಯವಾದಂತಹ ವಾಣಿಜ್ಯ ಬೆಳೆ. ಇದು ನಮ್ಮ ಮೈಸೂರು ಜಿಲ್ಲೆಯಲ್ಲಿ ಅನೇಕ ಸಂದರ್ಭಗಳಲ್ಲಿ ಕಾನೂನು ಸುವ್ಯವಸ್ಥೆಯ ಪರಿಸ್ಥಿತಿ ಮೀರತಕ್ಕ ಪರಿಸ್ಥಿತಿ ಉಂಟಾಗಿರತಕ್ಕದ್ದು ಇದೆ. ಇದನ್ನು ನಾನೇ ಕಂಡಿದ್ದೇನೆ. ಒಂದು ಕಡೆ ಡಬ್ಲ್ಯು.ಹೆಚ್.ಓ.

ನವರು ಇದರ ಮೇಲೆ ಅಂದರೆ ಹೊಗೆಸೊಪ್ಪಿನ ಮೇಲೆ ತನ್ನ ಉರಿಗಣ್ಣನ್ನು ಎಷ್ಟು ಪ್ರಭಾವಿತವಾಗಿ ಬೀರುತ್ತದೋ ಅಷ್ಟೇ ಪ್ರಭಾವಿಯುತವಾಗಿ ಇದನ್ನು ಪ್ರಪಂಚದಲ್ಲಿ ಸಮರ್ಥನೆ ಮಾಡತಕ್ಕಂಥಹ ಲಾಬಿಗಳು ಕೂಡ ಅಷ್ಟೇ ಸಮರ್ಥವಾಗಿ ಇದ್ದಾವೆ. ಅದೇ ಕಾರಣದಿಂದ ಮುಂದುವರಿದ ದೇಶಗಳಲ್ಲೂ ಕೂಡ ಈ ಹೊಗೆ ಸೊಪ್ಪನ್ನು ಪೂರ್ತಿಯಾಗಿ ವರ್ಜಿತ ಮಾಡಬೇಕು ಅಥವಾ ರದ್ದು ಮಾಡಬೇಕು ಎಂಬತಕ್ಕ ಪ್ರಯೋಗ ಯಶಸ್ವಿ ಆಗಲಿಲ್ಲ. ಇದಕ್ಕೆ ಕಾರಣವೇನೆಂದರೆ ಈ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿರತಕ್ಕಂತಂಥಹ ಪ್ರಭಾವ ಬೀರತಕ್ಕಂಥಹ ಈ ಲಾಬಿ ಎಂದು ಏನು ಕರೆಯುತ್ತೇವೆ, ಇದು ಕಾರಣ- ಆಗಿದೆ. ಇದು ಏನೇ ಆಗಿದ್ದರೂ ಕೂಡ ನಾನೂ ಒಬ್ಬ ವ್ಯವಸಾಯಗಾರನಾಗಿರುವ ಕಾರಣದಿಂದಲೂ ಕೂಡ ಏನೇ ಆದರೂ ಕೂಡ ಈ ಹೊಗೆಸೊಪ್ಪು ಬೆಳೆಯತಕ್ಕಂಥದ್ದನ್ನು ನಿಷೇಧ ಮಾಡಬೇಕಾಗಿರತಕ್ಕಂತ ಅವಶ್ಯಕತೆ ಇದೆ. ಇದು ಒಂದು ವಿಷಕಾರಕ ವಸ್ತು. ವಿಷಕಾರಕ ವಸ್ತುವನ್ನು ನಾವು ನಾನಾಕಾರಣದಿಂದ ಬೆಳೆಸುತ್ತೇವೆ. ಬೆಳೆಸಿರತಕ್ಕದ್ದು ರೈತರ ದೃಷ್ಟಿಯಿಂದ ಅದನ್ನು ಬೆಳೆಸುವುದರಿಂದ, ಆ ವಸ್ತುವಿನಿಂದ ಅನೇಕರ ಆರೋಗ್ಯಕ್ಕೆ ಕುಂದು ತರತಕ್ಕಂಥಹ ಕೆಲಸ ಇದರಿಂದ ಆಗುತ್ತದೆ. ಇದನ್ನು ನಾವು ಒಪ್ಪತಕ್ಕದ್ದು ಕೂಡ ಅಲ್ಲ. ಅದೇ ರೀತಿ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಏನು ನಡೆಯುತ್ತಿದೆ? ಈಗ ಕೆಲವು ಕಡೆ ಮೊದಲು ಬಂಗಾರ ಮತ್ತು ಉಳಿದಿರತಕ್ಕಂಥಹ ವಸ್ತುಗಳನ್ನು ಕಳ್ಳತನದಲ್ಲಿ ಅಂದರೆ ಸ್ಮಗಲ್ ಮಾಡತಕ್ಕದ್ದಕ್ಕೆ ಒಂದು ದೊಡ್ಡ ರ‍್ಯಾಕೆಟ್ ನಡೆಯಿತು. ಮಾಫಿಯಾ ಮೇಲೆ ನಡೆಯುತ್ತಿತ್ತು. ಇವತ್ತು ಅದೆಲ್ಲಾ ಹೋಗಿ ಡ್ರಗ್ ಪೆಡ್ಲರ್ಸ್ ಸರ್ಕಲ್ ಏನು ಇದೆ, ಈ ಡ್ರಗ್ ಮಾಫಿಯಾ ಎನ್ನತಕ್ಕದ್ದು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಬಹಳ ಪ್ರಬಲವಾಗಿರತಕ್ಕಂಥಹ ಮಾಫಿಯಾ ಆಗಿ ಪರಿವರ್ತನೆ ಆಗಿದೆ. ಮತ್ತು ಅದನ್ನು ಸಮರ್ಥನೆ ಮಾಡತಕ್ಕಂಥ ರಾಷ್ಟ್ರಗಳು ಕೂಡ ಇದ್ದಾವೆ. ಇವತ್ತು ಆಫ್‌ಘಾನಿಸ್ತಾನದಲ್ಲಿ ನೋಡಿದರೆ ಪ್ರಪಂಚಕ್ಕೆ ಆಗಿ ಮಿಗುವಷ್ಟು ವಸ್ತುಗಳು ಇದ್ದಾವೆ. ಓಪಿಯಮ್ ಮತ್ತು ಇತರ ವಸ್ತುಗಳನ್ನು ಬೆಳೆಯತಕ್ಕದ್ದು ಇದೆ. ಅವರು ಇದನ್ನೇ ಒಂದು ಅಸ್ತ್ರವನ್ನಾಗಿ ಬಳಸಿ ಇದನ್ನು ಮಾರಾಟ ಮಾಡಿ ಶಸ್ತಾಸ್ತ್ರಗಳನ್ನು ಬಳಸಿ ಆ ದೇಶದ ಆರ್ಥಿಕ ಪರಿಸ್ಥಿತಿಯನ್ನು ಮತ್ತು ರಾಜಕೀಯ ಪರಿಸ್ಥಿತಿಯನ್ನು ಕೈವಶ ಮಾಡಿಕೊಂಡಿರತಕ್ಕದ್ದು ಸಹ ಇದೆ. ಈಗ ನಮ್ಮಲ್ಲಿ ಹೆಚ್ಚಾಗಿ ಪ್ರಭಾವ ಬೀರತಕ್ಕಂಥಹ ವಸ್ತು ಎಂದರೆ ಅಂದರೆ ಗುಟ್ಕಾ. ಹೊಗೆ ಸೊಪ್ಪು ಮತ್ತು ಅಡಿಕೆ ಮತ್ತು ಸುಣ್ಣವನ್ನು ಹಾಗೂ ಇತರ ವಸ್ತು ಬೆರೆಸುತ್ತಾರೆಂದು ಹೇಳುತ್ತಾರೆ. ಇದು ಆರೋಗ್ಯಕ್ಕೆ ಮಾರಕ ಆಗತಕ್ಕದ್ದು- ಸಾಬೀತಾಗಿರತಕ್ಕದ್ದು. ಆದರೆ ಕೆಲವು ಲಾಬಿಗಳಿಗೆ ಮಣಿದು ಇದನ್ನು ನಾವು ಪ್ರಚಾರ ಮಾಡತಕ್ಕದ್ದು ಮತ್ತು ಅದನ್ನು ಮಾರಾಟಕ್ಕೆ ಬಿಟ್ಟಿರತಕ್ಕದ್ದು ಅಕ್ಷಮ್ಯ ಅಪರಾಧ ಎನ್ನತಕ್ಕದ್ದು ನನ್ನ ವೈಯಕ್ತಿಕವಾದಂತಹ ಅಭಿಪ್ರಾಯ ಆದ್ದರಿಂದ ಇದನ್ನು ತಡೆಗಟ್ಟಲು ಕೇವಲ ಸುಂಕ ಹಾಕುವುದರಿಂದ ತಡೆಗಟ್ಟಬಹುದು ಎಂದರೆ ಇದು ಆಗುವುದಿಲ್ಲ. ಆ ಚಟ ಹತ್ತಿರತಕ್ಕವರು ಏನು ಆಗಲಿ ಅದನ್ನು ಬಳಸೇ ಬಳಸುತ್ತಾರೆ. ಎಷ್ಟೇ ಹಣ ಕೊಟ್ಟರೂ ಕೂಡ ಚಿಂತೆ ಇಲ್ಲ, ಅದನ್ನು ಬಳಸುತ್ತಾರೆ. ಇದರಲ್ಲಿ ಡ್ರಗ್ ಅಡಿಕ್ಟ್ಸ್ ಇದ್ದಾರೆ. ನಾವು ನೋಡುತ್ತಿದ್ದೇವೆ. ಕೆಲವು ಡಾಕ್ಯುಮೆಂಟರಿ ಫಿಲಂಸ್‌ನಲ್ಲಿ, ಬೇರೆ ಬೇರೆ ಕಡೆ ಅಡ್ವರ್‌ಟೈಸ್‌ಮೆಂಟ್‌ನಲ್ಲಿ ಕೂಡ ನೋಡಿದ್ದೇವೆ. ಈ ಡ್ರಗ್ ಅಡಿಕ್ಟ್ಸ್ ಆಗಿರತಕ್ಕವರು ಸುಮ್ಮನೇ ಇರುವುದಿಲ್ಲ. ಬೇರೆ ಬೇರೆ ರೂಪದಲ್ಲಿ ಅಂದರೆ ಇಂಜಕ್ಷನ್ ರೂಪದಲ್ಲಿ ಆಗಬಹುದು ಅಥವಾ ಬೇರೆ ಬೇರೆ ರೂಪದಲ್ಲಿ ಆಗಿ, ಅದನ್ನು ಅವರು ಬಳಸಿದರೇ ಸಾಮಾನ್ಯ ಮನುಷ್ಯರಾಗತಕ್ಕದ್ದು.

ಇದೂ ಸಹ ಆ ರೀತಿಯಾದಂತಹ ಒಂದು ಮಾದಕ ವಸ್ತು. ಮತ್ತು ಇದು ಒಂದು ಅಡಿಕ್ಷನ್ ಆಗತಕ್ಕಂಥಹ ವಸ್ತು ಆಗಿರುವುದರಿಂದ ಹಾಗೂ ಸಾರ್ವಜನಿಕರ ಆರೋಗ್ಯವನ್ನು ಕಾಪಾಡಬೇಕಾಗಿರತಕ್ಕದ್ದು ಮುಖ್ಯ. ಅದರಲ್ಲೂ ಮುಖ್ಯವಾಗಿ ಯುವಕರ ಆರೋಗ್ಯವನ್ನು ಕಾಪಾಡಬೇಕಾಗಿರುವ ದೃಷ್ಟಿಯಿಂದ ಇದನ್ನು ಸಂಪೂರ್ಣವಾಗಿ ರದ್ದು ಮಾಡಬೇಕಾಗಿರತಕ್ಕದ್ದು ಅವಶ್ಯಕತೆ ಇದೆ. ಇದನ್ನು ಸಂಪೂರ್ಣವಾಗಿ ರದ್ದು ಮಾಡಬೇಕಾದಂತಹ ಅವಶ್ಯಕತೆ ಇದೆ. ಯಾವ ಲಾಬಿಗೂ ಕೂಡ ಮಣಿಯದೇ ಇದನ್ನು ರದ್ದು ಮಾಡಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಆದ್ದರಿಂದ ನೀವೇನೋ ಸ್ವಲ್ಪ ಮಟ್ಟಿಗೆ ಸುಂಕವನ್ನು ಜಾಸ್ತಿ ಮಾಡಿ ಕಡಿಮೆ ಮಾಡಬಹುದು ಎಂದು ತಿಳಿದಿರಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಲಾಬಿ ಹೇಗೆ ಆಗುತ್ತದೆ? ಏಕೆಂದರೆ ಗುಟ್ಕಾ ಮೇಲೆ 16 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಇದ್ದದ್ದು ಪ್ಲಸ್ 4 ಅಂದರೆ 20 ಪರ್ಸೆಂಟ್ ಲಕ್ಸುರಿ ಟ್ಯಾಕ್ಸ್ ಹಾಕಿ ಅದರಿಂದ 30 ಕೋಟಿ ರೂಪಾಯಿ ರೆವಿನ್ಯೂ ಬರತಕ್ಕದ್ದು ಮಾಡುತ್ತಿದ್ದಾರೆ. ಇದಕ್ಕೆ ಲಾಬಿ ಎಲ್ಲಿ ಬರುತ್ತದೆ?

ಶ್ರೀ ಎಸ್. ಸುರೇಶ್ ಕುಮಾರ್ : ಲಕ್ಸುರಿ ಎಂದು ಕರೆಯುವುದೇ ತಪ್ಪು. ಯಾವುದು ಲಕ್ಸುರಿ? ಯಾರದ್ದು ಲಕ್ಸುರಿ? ನಾನು ಹೇಳುವುದು ಲಕ್ಸುರಿ ಎಂದು ಕರೆಯುವುದೇ ತಪ್ಪು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದ್ದಂತಹ ಕಾನೂನನ್ನೇ ಮುಂದುವರಿಸಿಕೊಂಡು ಹೋಗಿದ್ದಾರೆ. ಇದೇನು ಹೊಸ ಕಾನೂನು ಅಲ್ಲ. 4 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಎಂದು ಹಾಕುವುದು ಬೇಡ ಎಂದು ಹೇಳಿ ಸುಪ್ರೀಂ ಕೋರ್ಟಿನವರು ಆಂಧ್ರ ಪ್ರದೇಶದ ವಿಚಾರದಲ್ಲಿ ತೀರ್ಪನ್ನು ಕೊಟ್ಟರು. ಆ ಜಡ್ಜ್‌ಮೆಂಟ್ ಕೂಡ ನಮಗೆ ಅಪ್ಲಿಕೆಬಲ್ ಆಗುತ್ತದೆ. ಅದಕ್ಕಾಗಿ ನಾವು 30 ಕೋಟಿ ರೂಪಾಯಿ ಕಳೆದುಕೊಳ್ಳುವುದಕ್ಕಿಂತಲೂ ಸೇಲ್ಸ್ ಟ್ಯಾಕ್ಸ್ ಎನ್ನುವುದನ್ನು ಲಕ್ಸುರಿ ಟ್ಯಾಕ್ಸ್‌ನಲ್ಲಿ ಸೇರಿಸಿ ಕಲೆಕ್ಟ್ ಮಾಡಿಕೊಳ್ಳಬೇಕು ಎನ್ನತಕ್ಕ ದೃಷ್ಟಿಯಿಂದ ತಂದಂತಹ ಸಣ್ಣ ತಿದ್ದುಪಡಿ; ಹೊರತಾಗಿ ನಾವೇನೋ ಸೃಷ್ಟಿ ಮಾಡಿರತಕ್ಕದ್ದು ಅಲ್ಲ.

1.30 ಪಿ.ಎಂ.

ಶ್ರೀ ಎಸ್.ಸುರೇಶ್‌ಕುಮಾರ್: ಇಲ್ಲಿ ಯುವ ಜನರನ್ನು ಉಳಿಸುವುದು ಬಹಳ ಮುಖ್ಯ. ಆದಾಯಕ್ಕಿಂತಲೂ ಮುಖ್ಯವಾಗಿ ಯುವ ಜನರನ್ನು ಉಳಿಸಬೇಕಾದುದು ಬಹಳ ಮುಖ್ಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮುಂದೆ ಆ ನೀತಿಯನ್ನು ಅನುಸರಿಸಿ ಗುಟ್ಕಾವನ್ನು ತೆಗೆದು ಹಾಕಲೇ ಬೇಕು ಎಂಬ ಸಂದರ್ಭ ಬಂದಾಗ ಆದರ ಬಗ್ಗೆ ಪರಿಶೀಲನೆ ಮಾಡೋಣ. ಆದರೆ ಸದ್ಯದಲ್ಲಿ ನಾವು ಇದರ ಬಗ್ಗೆ ಹಾಗೆ ಮುಂದುವರೆದರೆ ಅಕ್ಕಪಕ್ಕದ ರಾಜ್ಯಗಳಿಂದ ಗುಟ್ಕಾದ ಪುಡಿಗಳನ್ನು ತಂದು ಮಾರಾಟ ಮಾಡಿ ಅದರಿಂದ ಅನಾಹುತವಾಗುವ ಸಂದರ್ಭ ಬಹಳ ಇದೆ. ಇದು ತಮಗೂ ಗೊತ್ತಿದೆ. ನಾವು ಎಕ್ಸ್‌ಜ್‌ನಲ್ಲಿ ಎಷ್ಟೇ ಹತೋಟಿಯನ್ನು ಇಟ್ಟುಕೊಂಡಿದ್ದರೂ ಅಕ್ಕ ಪಕ್ಕದ ರಾಜ್ಯಗಳಿಂದ ಬಂದು ಸೆಕೆಂಡ್ಸ್, ಥರ್ಡ್ಸ್ ಎಂದು ಮಾರಿಕೊಂಡು

ಹೋಗುತ್ತಾರೆ. ಗುಲ್ಬರ್ಗಾ, ರಾಯಚೂರು ಭಾಗಗಳಲ್ಲಿ ಶೇಂದಿ ಮರಗಳೇ ಇಲ್ಲ, ಆದರೆ ಅಲ್ಲಿ ಶೇಂದಿ ಮಾರಾಟಕ್ಕೆ ಏನು ಅವಕಾಶ ಕೊಡಲಾಗಿತ್ತು ಅದನ್ನು ಈ ಕಾರಣಕ್ಕಾಗಿ ರದ್ದುಮಾಡಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಆಯವ್ಯಯ ಭಾಷಣದಲ್ಲಿ ಹೇಳಿದ್ದಾರೆ. ಏಕೆಂದರೆ ಕ್ಲೋರೋಹೈಡ್ರೆ ಟನ್ನು ಉಪಯೋಗಿಸಿ ಮಾರಾಟ ಮಾಡುತ್ತಿದ್ದರು. ಆದ್ದರಿಂದ ಯಾವ್ಯಾವಾಗ ನೀತಿಗಳನ್ನು ಅನುಸರಿಸಿ ಮಾರಾಟವನ್ನು ನಿಲ್ಲಿಸಬೇಕು ಎಂಬ ಪ್ರಮೇಯ ಬಂದಾಗ ಅದನ್ನು ಮಾಡೋಣ. ಆದ್ದರಿಂದ ಸಧ್ಯದಲ್ಲಿ ಇದನ್ನು ನೇರವಾಗಿ ಕಳೆದುಕೊಳ್ಳುವ ಬದಲು ವಿಲಾಸ ತೆರಿಗೆಯ ರೂಪದಲ್ಲಿ ತರಬೇಕು ಎಂಬ ದೃಷ್ಟಿಯಿಂದ ಮಾಡಿರತಕ್ಕದ್ದು. ಮತ್ತೆ ಬೇರೆ ಯಾವ ಉದ್ದೇಶವೂ ಇಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಬಡವರು ನಾಶವಾಗುತ್ತಾರೆ, ಅವರ ಆರೋಗ್ಯ ಕೆಟ್ಟುಹೋಗುತ್ತದೆ ಎಂಬ ಉದ್ದೇಶದಿಂದ ಗುಲ್ಬರ್ಗಾ ಮತ್ತು ರಾಯಚೂರಿನಲ್ಲಿ ಶೇಂದಿ ಮಾರಾಟವನ್ನು ರದ್ದು ಮಾಡಿರುವುದಾಗಿ ಮಾನ್ಯ ಖರ್ಗೆಯವರು ತಿಳಿಸಿದರು. ಬರತಕ್ಕ ಆದಾಯ ಕಡಿಮೆಯಾದರೂ ಚಿಂತೆ ಇಲ್ಲ ಬಡವರ ಆರೋಗ್ಯ ಬಹಳ ಮುಖ್ಯ ಎಂಬ ಉದ್ದೇಶದಿಂದ ಆ ಜಿಲ್ಲೆಗಳಲ್ಲಿ ಶೇಂದಿ ಮಾರಾಟವನ್ನು ರದ್ದು ಮಾಡಿದ್ದೀರಿ. ಅದೇ ಸೂತ್ರವನ್ನು ಇದಕ್ಕೂ ಅನುಸರಿಸಿ ರದ್ದು ಮಾಡಿ ಎನ್ನುವುದು ನನ್ನ ವಾದ. ಈಗ ಇದನ್ನು ಹೆಚ್ಚು ಮಾಡಿರುವುದರಿಂದ 30 ಕೋಟಿ ಆದಾಯ ಬರುವುದಾಗಿ ತಿಳಿಸಿದ್ದಾರೆ. ಇದಕ್ಕೆ ನನ್ನ ವಿರೋಧವಿಲ್ಲ. ಆದರೆ ಇದನ್ನು ಪೂರ್ತಿಯಾಗಿ ರದ್ದು ಮಾಡಬೇಕು ಎಂಬ ಸಲಹೆಯನ್ನು ನೀಡಬಯಸುತ್ತೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕದಲ್ಲಿ ಗುಟ್ಕಾದ ಮೇಲೆ ತೆರಿಗೆಯನ್ನು ಹಾಕತಕ್ಕದ್ದು ಆದರ ಮೂಲಕ ಸರ್ಕಾರಕ್ಕೆ 30 ಕೋಟಿ ಆದಾಯ ಬರತಕ್ಕದ್ದು ಸರ್ಕಾರದ ಯೋಜನೆಯಾಗಿದೆ, ಇದು ಸರಿಯೆಂದು ನನ್ನ ಭಾವನೆ, ಇದರಲ್ಲಿ ಯಾವುದೋ ಕಾಣದ ಕೈ ಕೆಲಸ ಮಾಡುತ್ತಿದೆಯೆಂದೇನೋ ಹಲವರು ಹೇಳಿದ್ದಾರೆ ಅದು ಸರಿಯಲ್ಲ. ಇದು ಕೆಲವು ಜನರ ಜೀವನದ ಅವಶ್ಯಕತೆಯಾಗಿದೆ. ಅಡಿಕೆ ಮತ್ತು ಹೊಗೆಸೊಪ್ಪು ಬೆಳೆಗಾರರು ಬದುಕಲು ಇರತಕ್ಕ ಸ್ಥಿತಿ ಇದಾಗಿದೆ. ಇಲ್ಲಿ ಇರುವವರೆಲ್ಲ ಬಡ ರೈತರುಗಳೇ? ಒಂದು ಎಕರೆ, ಎರಡು ಎಕರೆ ಈ ರೀತಿ ಸ್ವಲ್ಪ ಪ್ರಮಾಣದಲ್ಲಿ ಜಮೀನು ಇಟ್ಟುಕೊಂಡು ಅಡಿಕೆ, ಹೊಗೆಸೊಪ್ಪು ಬೆಳೆಯುತ್ತಿರುವ ಬಡ ರೈತರು ಬೆಂಗಳೂರಿಗೆ ಬಂದು ಓಡಾಡುತ್ತಿರುವ ಪರಿಸ್ಥಿತಿ ಬರಬೇಕಾದರೆ ಈ ಗುಟ್ಕಾ ಇರುವುದರಿಂದಲೇ ಗುಟ್ಕಾ ಸೇವನೆಯಿಂದ ಹಾನಿಯೇನಾಗುತ್ತದೆ ಎಂಬ ಬಗ್ಗೆ ಒಂದು ಮರದಿ ಸಹ ಬಂದಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ತಮ್ಮಲ್ಲಿ ಒಬ್ಬರು ಸದಸ್ಯರು ಗುಟ್ಕಾ ಬೇಕು ಎನ್ನುತ್ತೀರಿ, ಮತ್ತೊಬ್ಬರು ಬೇಡ ಎನ್ನುತ್ತೀರಿ, ತಮ್ಮಲ್ಲಿಯೇ ಇದರ ಬಗ್ಗೆ ಒಮ್ಮತವಿಲ್ಲವಲ್ಲ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ರಾಜಕೀಯ ಒಮ್ಮತ ಬೇರೆ, ಜೀವನವನ್ನು ನಡೆಸುವಲ್ಲಿ ಇರುವ ಒಮ್ಮತ ಬೇರೆ ಇರುತ್ತದೆ. ಗುಟ್ಕಾ ಸೇವನೆಯು ಹೊಸದಾಗಿ ಬಂದಿರುವುದೇನಲ್ಲ. ಭಾರತವು ಎಂದು ಜನ್ಮತಾಳಿತೋ ಅಂದಿನಿಂದಲೂ ಅಡಿಕೆ, ಸುಣ್ಣ, ಹೊಗೇಸೊಪ್ಪು, ವೀಳೆದೆಲೆ

ತಿನ್ನುತ್ತಿರುವುದನ್ನು ನೋಡುತ್ತಿದ್ದೇವೆ. ಗುಟ್ಕಾ ಪ್ಯಾಕೇಟ್ ಮೇಲೆ ಅದರಲ್ಲಿ ಏನೇನು ಯಾವ್ಯಾವ ಪ್ರಮಾಣದಲ್ಲಿ ಎಂಬುದನ್ನು ಪ್ರಿಂಟ್ ಮಾಡಿಸಲೇ ಬೇಕು ಎಂಬುದನ್ನು ನಾವುಗಳಿಲ್ಲರೂ ಒಪ್ಪಿಕೊಳ್ಳುತ್ತೇವೆ. ಚೆನ್ನಾಗಿರುವ ಗುಟ್ಕಾವನ್ನು ಮಾಡಿದರೆ ಯಾರಿಗೂ ಹಾನಿಯಾಗುವುದಿಲ್ಲ. ನಮ್ಮಲ್ಲಿರುವ ಒಬ್ಬರು ಸದಸ್ಯರು ನನ್ನ ಜೊತೆ ಮಾತನಾಡುತ್ತ 1989-90ರವರೆಗೆ ಸಿಗರೇಟು ಸೇದುತ್ತಿದ್ದೆ ಆಗ ನನಗೆ ಹೃದಯ ಬೇನೆ ಬಂದಿತ್ತು, ಅನಂತರ ನಾನು ಗುಟ್ಕಾವನ್ನು ತಿನ್ನಲು ಪ್ರಾರಂಭ ಮಾಡಿದೆ. ಆಗಿನಿಂದ ನನಗೆ ಏನೂ ಆಗಿಲ್ಲವೆಂದು ಹೇಳಿದರು. ಅವರ ಹೆಸರನ್ನು ಹೇಳುವ ಅಗತ್ಯವಿಲ್ಲ. ತಾವು ಮೊದಲು ಸಿಗರೇಟು, ಬೀಕ್ಕರನ್ನು ರದ್ದು ಮಾಡಿದರೆ ಅನಂತರ ಬೇಕಾದರೆ ಗುಟ್ಕಾವನ್ನು ರದ್ದು ಮಾಡಿ, ಇದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಬಲಗಣ್ಣನ್ನು ತೆಗೆದುಹಾಕಿದರೆ ನನ್ನ ಎಡಗಣ್ಣನ್ನು ತೆಗೆದುಹಾಕಿ ಎಂಬಂತಾಯಿತು ತಮ್ಮ ಮಾತು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಅಡಿಕೆ ಬೆಳೆಗಾರರು ಯಾರ ಮಗ್ಗಲಿನಿಂದಾದರೂ ಬದುಕಬೇಕಾಗಿದೆ. ಕಾರಣ ಇವರುಗಳಲ್ಲಿ ಲಾಬಿಗಳ್ಯಾವುದೂ ಇಲ್ಲ. ಆದ್ದರಿಂದ ಗುಟ್ಕಾ ಮಾರಾಟದಲ್ಲಿ ಕೆಲವೊಂದು ಮಾರ್ಪಾಟುಗಳನ್ನು ಮಾಡಲು ನಮ್ಮ ಸಮ್ಮತಿ ಇದೆ. ತೆರಿಗೆ ಹಾಕುವುದು ಮತ್ತು ಪ್ಯಾಕೇಟ್ ಮೇಲೆ ಅದರಲ್ಲಿ ಏನೇನಿದೆ ಎಂಬ ಬಗ್ಗೆ ವಿವರಣೆ ಪ್ರಿಂಟ್ ಮಾಡುವುದು, ಬೇಕಾದರೆ ಗುಟ್ಕಾ ಸೇವನೆ ಆರೋಗ್ಯಕ್ಕೆ ಹಾನಿಕಾರಕ ಎಂಬುದನ್ನು ಪ್ರಿಂಟ್ ಮಾಡಲೂ ಸಹ ನಮ್ಮ ಸಹಮತವಿದೆ. ನನಗೆ ತಿಳಿದ ಮಟ್ಟಿಗೆ ಇವತ್ತು ಗುಟ್ಕಾವನ್ನು ತಯಾರು ಮಾಡತಕ್ಕ 320 ಕಂಪನಿಗಳು ಭಾರತದಲ್ಲಿವೆ. ಅದರಲ್ಲಿ ಸುಮಾರು 20 ಕಂಪನಿಗಳು ಒಳ್ಳೆಯ ರೀತಿಯಿಂದ ಉತ್ಪಾದನೆ ಮಾಡುತ್ತಿವೆ. ಇದರಿಂದ ಆರೋಗ್ಯಕ್ಕೆ ಯಾವುದೇ ಹಾನಿಯಾಗುವುದಿಲ್ಲ. ಆದರೆ 300 ಕಂಪನಿಗಳು ಏನು ಗುಟ್ಕಾವನ್ನು ಉತ್ಪಾದನೆ ಮಾಡುತ್ತಿದೆ ಅದರಲ್ಲಿ 1 ರಿಂದ 5 ಪರ್‌ಸೆಂಟ್‌ವರೆಗೆ ಇರತಕ್ಕ ಗುಟ್ಕಾಗಳಲ್ಲಿ ಆರೋಗ್ಯಕ್ಕೆ ಹಾನಿಯಾಗುತ್ತಿದೆ. ಆ ಕಂಪನಿಯ ಮೇಲೆ, ಅದರ ಉತ್ಪಾದನೆಯ ಮೇಲೆ ನಿಯಂತ್ರಣವನ್ನು ಏರಲು ಸರ್ಕಾರ ಯೋಚನೆ ಮಾಡಿ ಈ ಗುಟ್ಕಾವನ್ನು ಉಳಿಸಬೇಕಾಗುತ್ತದೆ, ಇದರ ಮೇಲೆ ತೆರಿಗೆಯನ್ನು ಹಾಕಿ ಆದಾಯವನ್ನು ಜಾಸ್ತಿ ಮಾಡಬೇಕಾಗುತ್ತದೆ. ಬಹಳಷ್ಟು ಕಡಿಮೆ ಹಣದಲ್ಲಿ ಜನರಿಗೆ ಸಂತೃಪ್ತಿಯನ್ನು ತರತಕ್ಕ ಸಾಧನ ಇದಾಗಿದೆ. ಆದ್ದರಿಂದ ಇದನ್ನು ಉಳಿಸಬೇಕಾಗುತ್ತದೆ. ತಾವೇನು ಇದರ ಮೇಲೆ ತೆರಿಗೆ ಹಾಕುತ್ತಿದ್ದೀರಿ ಅದನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಗುಟ್ಕಾದ ಮೇಲೆ ತೆರಿಗೆ ಹಾಕಿರುವುದರಿಂದ ಸರ್ಕಾರಕ್ಕೆ ಆದಾಯ ಬರುತ್ತದೆ ಎಂಬುದನ್ನು ಸ್ವಾಗತಿಸಬಹುದು. ಆದರೆ ಇದರ ಜೊತೆಯಲ್ಲಿಯೇ ಜನರ ಆರೋಗ್ಯದ ಬಗ್ಗೆ ಸಹ ಗಮನಹರಿಸಬೇಕಾಗುತ್ತದೆ. ಅಡಿಕೆ ಬೆಳೆಗಾರರ ಹಿತದೃಷ್ಟಿಯಿಂದ ಗುಟ್ಕಾ ಇರಬೇಕೆಂದು ಮಾನ್ಯ ಮಲ್ಲಿಕಾರ್ಜುನ್‌ರವರು ಹೇಳಿದರು. ನಾನೂ ಅಡಿಕೆ ಬೆಳೆಯುತ್ತೇನೆ. ಆದರೆ ಇಲ್ಲಿ ಐದು ಕೋಟಿ ಜನರ ಆರೋಗ್ಯ ಮುಖ್ಯ. 30 ಕೋಟಿ ಆದಾಯ ಬರಬಹುದು, ಆದರೆ ಆರೋಗ್ಯ ಕೆಟ್ಟು ಆಸ್ಪತ್ರೆಗೆ, ವೈದ್ಯರಿಗೆ ಮಾಡತಕ್ಕ ಪೆಚ್ಚಿದ ಬಗ್ಗೆ ಗಮನಹರಿಸಿದರೆ ತಾವೇನು ವಿಧೇಯಕವನ್ನು ಮಂಡಿಸಿದ್ದೀರಿ ಅದರಿಂದ ಜನರಿಗೆ ಅನುಕೂಲವಾಗುವುದಿಲ್ಲ, ಆದ್ದರಿಂದ ಸರ್ಕಾರ ಈ ವಿಧೇಯಕವನ್ನು ವಾಪಸ್ ತೆಗೆದುಕೊಂಡರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ.

+ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ಗುಟ್ಕಾದ ಮೇಲೆ ತೆರಿಗೆಯನ್ನು 4 ಪರ್‌ಸೆಂಟ್‌ನಿಂದ 20 ಪರ್‌ಸೆಂಟ್‌ಗೆ ತರುತ್ತಿರುವ ಈ ಸಂದರ್ಭದಲ್ಲಿ ಅದಕ್ಕಿಂತ ಮುಖ್ಯವಾಗಿ ಬೇರೊಂದು ಚರ್ಚೆ ನಡೆಯುತ್ತಿದೆ. ಗುಟ್ಕಾದಲ್ಲಿ ಅಡಿಕೆಯನ್ನು ಮುಖ್ಯವಾದ ಕಚ್ಚಾ ಸಾಮಗ್ರಿಯಾಗಿ ಉಪಯೋಗಿಸಲಾಗುತ್ತಿದೆ. ಇದಕ್ಕೆ ತಂಬಾಕು ಇತರೆ ವಸ್ತುಗಳನ್ನು ಸೇರಿಸುವ ಮೂಲಕ ಅದು ಗುಟ್ಕಾವೆಂದು ಕರೆಸಿಕೊಳ್ಳುತ್ತದೆ. ಅಡಿಕೆಗೆ ನಮ್ಮ ಸಂಸ್ಕೃತಿಯಲ್ಲಿ ಬಹಳ ಹಿಂದಿನಿಂದಲೂ ಪ್ರಾಮುಖ್ಯತೆಯಿರುವುದನ್ನು ನಾವು ನೀವೆಲ್ಲರು ಒಪ್ಪಿಕೊಳ್ಳುತ್ತೇವೆ. ನಾವು ಯಾವುದೇ ಶುಭ ಕೆಲಸವಾಗಬೇಕಾಗಿದ್ದರೆ ವೀಳ್ಯವನ್ನು ಕೊಡದೆ ಹೊರಡು ಆಗುವುದಿಲ್ಲ. ಆದ್ದರಿಂದ ಅಡಿಕೆ, ಎಲೆ ಬಹಳ ಮುಖ್ಯ.

ಅಧ್ಯಕ್ಷರು : ಚುನಾವಣೆಯ ಸಂದರ್ಭದಲ್ಲಿ ಸಹ ಬೂತಿನ ಹತ್ತಿರ ವೀಳ್ಯವನ್ನು ಕೊಡುವ ಪದ್ಧತಿ ಇದೆಯಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ (ಕಾಗೇರಿ) : ಗುಟ್ಕಾವನ್ನು ತಯಾರು ಮಾಡುತ್ತಿರುವುದರಿಂದಾಗಿ ಅಡಿಕೆಗೆ ಸ್ವಲ್ಪ ಬೆಲೆ ಬಂದಿದೆ. ಇದರಿಂದಾಗಿ ಅಡಿಕೆ ಬೆಳೆಗಾರರು ನೆಮ್ಮದಿಯ ಉಸಿರನ್ನು ಬಿಡುತ್ತಿದ್ದಾರೆ. ಮಾರುಕಟ್ಟೆ ವ್ಯವಸ್ಥೆಗಳಿಂದಾಗಿ ಅಡಿಕೆ ಬೆಳೆಗಾರರು ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಗೆ ಹೋಗಿಲ್ಲ. ಇಂದಿನ ಬಜೆಟ್‌ನಲ್ಲಿ ಅಡಿಕೆ ಮೇಲಿನ ಟರ್ನೋವರ್ ಟ್ಯಾಕ್ಸ್, ಮಲ್ಟಿಲೆವಲ್ ತೆರಿಗೆಯನ್ನು ತೆಗೆದಿದ್ದಾರೆ. ಇದರಿಂದ ಅಡಿಕೆ ಬೆಳೆಗಾರರಿಗೆ ಅನುಕೂಲವಾಗಿದೆ. ಸರ್ಕಾರ ಈ ದಿಸೆಯಲ್ಲಿ ಬೇರೆ ಬೇರೆ ತಜ್ಞರು ಇರುವಂತಹ ಸಮಿತಿಯಿಂದ ವರದಿಯನ್ನು ತರಿಸಿಕೊಂಡಿರುವುದು ಸರಿಯಷ್ಟೆ. ಗುಟ್ಕಾದಲ್ಲಿ ವಿಷಯುಕ್ತ ಪದಾರ್ಥಗಳನ್ನು ಸೇರಿಸುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಅವಕಾಶ ಇಲ್ಲದಿದ್ದರೂ ಅದನ್ನು ಹೇಗೆ ಸೇರಿಸುತ್ತಿದ್ದಾರೆ? ಆ ರೀತಿ ವಿಷಯುಕ್ತ ಪದಾರ್ಥಗಳನ್ನು ಸೇರಿಸಿರುವ ಗುಟ್ಕಾ ಮಾರುಕಟ್ಟೆಗೆ ಬರದಂತೆ ಮಾಡಬೇಕಾದುದು ಸರ್ಕಾರದ ಪ್ರಮುಖ ಕರ್ತವ್ಯವಾಗಿದೆ. ನನ್ನ ಸ್ನೇಹಿತರೊಬ್ಬರು ಗುಟ್ಕಾದಲ್ಲಿ ಅಮಲು ಬರುವುದಕ್ಕಾಗಿ ಮೆಗ್ನೀಷಿಯಂ ಎಂಬ ರಾಸಾಯನಿಕವನ್ನು ಸೇರಿಸುತ್ತಾರೆ ಎಂದು ಹೇಳಿದರು. ಅದೇ ರೀತಿ ದೇಹದ ಇತರ ಅಂಗಾಗಗಳ ಮೇಲೆ ಪರಿಣಾಮ ಬೀರುವಂತಹ ಪದಾರ್ಥಗಳನ್ನೂ ಸಹಾ ಗುಟ್ಕಾದಲ್ಲಿ ಸೇರಿಸಲಾಗುತ್ತಿದೆ. ಕಾನೂನಿನಲ್ಲಿ ಇದಕ್ಕೆ ಅವಕಾಶ ಇಲ್ಲ. ಕಾನೂನು ಬಾಹಿರವಾಗಿ ಈ ರೀತಿ ವಿಷಯುಕ್ತ ವಸ್ತುಗಳನ್ನು ಸೇರಿಸದಂತೆ ತಡೆಗಟ್ಟಬೇಕು. ಅವುಗಳಿಂದ ದುಷ್ಪರಿಣಾಮಗಳಾಗುತ್ತಿದೆಯೇ ವಿನಃ ಅಡಿಕೆ ಬಳಸುವುದರಿಂದ ಯಾವುದೇ ದುಷ್ಪರಿಣಾಮವಾಗುತ್ತಿಲ್ಲ. ನಾವು ಈ ರೀತಿ ವಿಷಯುಕ್ತವಾದಂತಹ ವಸ್ತುಗಳನ್ನು ಗುಟ್ಕಾಗೆ ಸೇರಿಸದಂತೆ ತಡೆಯುವುದಕ್ಕೆ ಬೇಕಾದಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇದು ಕೇವಲ ನಮ್ಮ ರಾಜ್ಯ ಸರ್ಕಾರದಿಂದಲೇ ಸಾಧ್ಯವಿಲ್ಲ. ಉತ್ತರ ಪ್ರದೇಶ ಮುಂತಾದ ಇತರ ರಾಜ್ಯಗಳೂ ಸಹಿತ ಬಹಳ ದೊಡ್ಡ ಪ್ರಮಾಣದಲ್ಲಿ ಗುಟ್ಕಾ ಮಾರಾಟದ ವ್ಯವಸ್ಥೆಯನ್ನು ಹೊಂದಿದೆ. ಆ ರಾಜ್ಯಗಳಲ್ಲೂ ಕೂಡ ಗುಟ್ಕಾಕ್ಕೆ ಈ ರೀತಿಯ ವಿಷಯುಕ್ತವಾದಂತಹ ವಸ್ತುಗಳನ್ನು ಸೇರ್ಪಡೆ ಮಾಡದಂತೆ ಕ್ರಮ ತೆಗೆದುಕೊಳ್ಳಬೇಕಾದ ಅಗತ್ಯವನ್ನು ತಿಳಿಸಿಹೇಳಬೇಕಾಗಿದೆ. ಸರ್ಕಾರದ ಚಿಂತನೆ ಆ ದಿಸ್ಸಿನಲ್ಲಿ ಸಾಗಬೇಕು. ಅಡಿಕೆ ಬೆಳೆಗಾರರ ಮೇಲೆ ತಪ್ಪು ಅಭಿಪ್ರಾಯ ಬರದಂತೆ ಸರ್ಕಾರ ಗಮನಿಸಬೇಕು. ಗುಟ್ಕಾ ಮೇಲಿನ ತೆರಿಗೆ ವಿಧಿಸುವ ಪ್ರಸ್ತಾಪವನ್ನು ಕೈಬಿಡಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

+ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಆಗಲೇ ಹೇಳಿದಂತೆ ನಮ್ಮದು ಅಡಿಕೆ ಬೆಳೆಗಾರರ ರಾಜ್ಯವಾಗಿದೆ. ಗುಟ್ಕಾ ಬ್ಯಾನ್ ಮಾಡಬೇಕೆಂದು ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಹುಯಿಲೆದ್ದಾಗ ನಾನು ಮಾನ್ಯ ಕಾಗೋಡು ತಿಮ್ಮಪ್ಪನವರು ಸಹಿತ ಕೆಲವು ಶಾಸಕರುಗಳನ್ನು ನಿಯೋಗವೊಂದರಲ್ಲಿ ಕರೆದುಕೊಂಡು ಹೋಗಿ ದೆಹಲಿಯಲ್ಲಿ ಮತ್ತು ರಾಜ್ಯ ಸರ್ಕಾರದ ಜೊತೆಗೆ ಮಾತನಾಡಿ ಗುಟ್ಕಾ ಬ್ಯಾನ್ ಮಾಡದಂತೆ ತಡೆದಿದ್ದೇವೆ. ನಮ್ಮದು ಅಡಿಕೆ ಬೆಳೆಗಾರರ ರಾಜ್ಯವಾದ್ದರಿಂದ ನಮ್ಮ ಸರ್ಕಾರದ ಬೊಕ್ಕಸಕ್ಕೆ ಅವರಿಂದ ಮಾರುಕಟ್ಟೆ ಸೆಸ್ ಮತ್ತು ಸೇಲ್ಸ್ ಟ್ಯಾಕ್ಸ್ ರೂಪದಲ್ಲಿ ಹಾಗೂ ಇನ್ನಿತರ ರೀತಿಯಲ್ಲಿ ಸಾಕಷ್ಟು ಹಣ ಸಂಗ್ರಹವಾಗುತ್ತಿದೆ. ನಾವು ಅದರ ಮೇಲೆ ಖರ್ಚು ಮಾಡುವಂತಹ ಹಣ ಬಹಳ ಕಡಿಮೆ. ರೈತರು ಬೆಳೆದಿರತಕ್ಕಂಥ ಎಲ್ಲಾ ರೀತಿಯ ಆಹಾರ ಧಾನ್ಯಗಳ ಬೆಲೆ ಕುಸಿತ ಉಂಟಾಗಿ ರೈತರು ಪಡಬಾರದಂತಹ ಕಷ್ಟ ಪಡುತ್ತಿರುವಂತಹ ಈ ಸ್ಥಿತಿಯಲ್ಲಿ ಅಡಿಕೆ ಬೆಳೆಗಾರರ ವರ್ಗ ಮಾತ್ರ ಸ್ವಲ್ಪವಾದರೂ ನೆಮ್ಮದಿಯಿಂದ ಇದೆ. ಆ ಬೆಳೆಗಾರರಿಗೂ ಕೂಡ ತೊಂದರೆ ಮಾಡುವಂತಹ ಕೆಲಸವನ್ನು ನಾವ್ಯಾರೂ ಕೂಡ ಮಾಡಬಾರದು. ಅಡಿಕೆ ಕಷ್ಟಪಟ್ಟು ಪರಂಪರಾನುಗತವಾಗಿ ಬೆಳೆದುಕೊಂಡು ಬಂದಿರುವಂಥಾದ್ದು ಆಗಿದೆ. ಇವತ್ತು ಅಡಿಕೆ ಬೆಳೆದು ನಾಳೆ ಅದನ್ನು ಕಟ್ ಮಾಡಿ ಹಾಕಿ ನಾಳೆ ಬೇರೊಂದು ಬೆಳೆ ಬೆಳೆಯುವುದಕ್ಕಾಗುವುದಿಲ್ಲ. ಅದೇ ರೀತಿ ಬೆಲೆ ಕುಸಿತ ಉಂಟಾಯಿತು ಎಂದುಕೊಂಡು ಒಂದು ಬೆಳೆ ಬಿಟ್ಟು ಇನ್ನೊಂದು ಬೆಳೆ ಬೆಳೆದಂತೆ ಅಡಿಕೆ ಬೆಳೆಯುವುದಕ್ಕಾಗುವುದಿಲ್ಲ. ಒಂದು ಅಡಿಕೆ ಬೆಳೆ ಬರಬೇಕಾದರೆ 15 ವರ್ಷ ಕಷ್ಟಪಟ್ಟು ಬೆಳೆದರೆ 16ನೇ ವರ್ಷದಿಂದ ಒಳ್ಳೆಯ ಫಸಲು ಬರಲಿಕ್ಕೆ ಶುರುವಾಗುತ್ತದೆ. ಅಡಿಕೆ ಬೆಳೆಗಾರರು ಇವತ್ತು ಇಂತಹ ಒಂದು ಪರಿಸ್ಥಿತಿಯಲ್ಲಿದ್ದಾರೆ. ಇವತ್ತು ಅಡಿಕೆಗೆ ಒಳ್ಳೆಯ ಬೆಲೆ ದೊರೆಯುತ್ತಿರುವುದರಿಂದಲೇ ಕೋಲಾರ ಸೇರಿದಂತೆ ರಾಜ್ಯದ ಇತರ ಕಡೆಗಳಲ್ಲೂ ಸಹಾ ಲಾಭದ ಆಸೆಯಿಂದ ರೈತರು ಅಡಿಕೆ ಬೆಳೆಯುವುದಕ್ಕೆ ಪ್ರಾರಂಭ ಮಾಡುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಗುಟ್ಕಾ ಮೇಲೆ ಟ್ಯಾಕ್ಸ್ ಅನ್ನು ಜಾಸ್ತಿ ಮಾಡುವುದರಿಂದ ಅಪ್ರತ್ಯಕ್ಷವಾಗಿ ಇವತ್ತು ಅಡಿಕೆ ಮೇಲೆ ಟ್ಯಾಕ್ಸ್ ಜಾಸ್ತಿ ಮಾಡಿದಂತಾಗುತ್ತದೆ. ಗುಟ್ಕಾ ಮಾರುಕಟ್ಟೆಯಿಂದಲೇ ಇವತ್ತು ಅಡಿಕೆಗೆ ಒಳ್ಳೆಯ ಬೆಲೆ ಬಂದಿದೆ. ನಾವೆಲ್ಲರೂ ಇದನ್ನು ಓಪನ್ನಾಗಿ ಒಪ್ಪಿಕೊಳ್ಳೋಣ. ಎಲ್ಲೆಲ್ಲಿ ಅಡಿಕೆ ತಿನ್ನುತ್ತಿರಲಿಲ್ಲವೋ ಅಲ್ಲಿಯೂ ಕೂಡ ಇವತ್ತು ಗುಟ್ಕಾ ರೂಪದಲ್ಲಿ ಅಡಿಕೆ ತಿನ್ನುತ್ತಿದ್ದಾರೆ. ವಿದೇಶಗಳಿಗೂ ಕೂಡ ಸಾಕಷ್ಟು ಗುಟ್ಕಾ ರಫ್ತಾಗುತ್ತಿದೆ. ಸುಮಾರು 600-700 ಕೋಟಿ ರೂಪಾಯಿಗಳಷ್ಟು ಗುಟ್ಕಾ ಕಳೆದ ಒಂದು ವರ್ಷದಲ್ಲೇ ರಫ್ತಾಗಿದೆ. ಆದ್ದರಿಂದ ದಯಮಾಡಿ ಇದರ ಬಗ್ಗೆ ಬಹಳ ಕೂಲಂಕುಷವಾಗಿ ಆಲೋಚನೆ ಮಾಡಬೇಕು. ಗುಟ್ಕಾದ ಮೇಲೆ ತೆರಿಗೆ ಹಾಕುವುದರ ಮೂಲಕ ಅಡಿಕೆ ಬೆಳೆಗಾರರ ರಾಜ್ಯವಾದ ನಾವು ಅಡಿಕೆ ಬೆಳೆಗಾರರ ಕುತ್ತಿಗೆ ಹಿಸುಕುವ ಈ ಕ್ರಮವನ್ನು ಇತರ ರಾಜ್ಯಗಳಿಗೂ ಹೇಳಿಕೊಟ್ಟಂತಾಗುತ್ತದೆ. ಇದರಿಂದ ನಮ್ಮ ಅಡಿಕೆ ಬೆಳೆಗಾರರ ಗತಿ ಏನಾಗುತ್ತಿದೆ ಎಂಬುದನ್ನು ಸರ್ಕಾರ ಯೋಚಿಸಬೇಕು. ಗುಟ್ಕಾಗೆ ಟ್ಯಾಕ್ಸ್ ಹಾಕುವುದರ ಹಿಂದೆ ಸಿಗರೇಟ್ ಲಾಬಿ ಸಾಕಷ್ಟು ಕೆಲಸ ಮಾಡುತ್ತಿದೆ. ಗುಟ್ಕಾ ಬಂದ ಮೇಲೆ ಸಿಗರೇಟ್‌ನ ಜನಪ್ರಿಯತೆ ಕುಸಿದಿದೆ. ಹಿಂದೆ ಅರ್ಧ ಚಹಾ ಅಥವಾ ಟೀ ಕುಡಿದು ನಂತರ ಸಿಗರೇಟ್ ಸೇದುವಂತಹ ಪರಿಪಾಠ ಕಾಲೇಜು ಆವರಣಗಳಲ್ಲಿ ಇತರೆಡೆಗಳಲ್ಲಿ ಕಾಣಬಹುದಾಗಿತ್ತು. ಆದರೆ ಇಂದಿನ ದಿನಗಳಲ್ಲಿ ಗುಟ್ಕಾ ತಿನ್ನುವುದು ಹೆಚ್ಚಾಗಿದೆ. ಸಿಗರೇಟ್ ಸೇದುವುದನ್ನು ಹೆಚ್ಚು ಕಡಿಮೆ

ಎಲ್ಲರೂ ಬಿಟ್ಟಿದ್ದಾರೆ. ಸಿಗರೇಟ್ ಸೇಲ್ಸ್ ಬಹಳ ಕಡಿಮೆಯಾಗಿ ಹೋಗಿದೆ. ವಿದೇಶಿ ಸಿಗರೇಟ್ ಕಂಪನಿಗಳೂ ಕೂಡ ನಮ್ಮ ದೇಶದಿಂದ ಇವತ್ತು ಮೂಟೆ ಕಟ್ಟಲಿಕ್ಕೆ ಶುರು ಮಾಡಿದ್ದಾರೆ. ಸಿಗರೇಟ್ ಲಾಬಿ ವಿಶೇಷವಾದಂತಹ ಪ್ರಯತ್ನಗಳನ್ನು ನಡೆಸಿ ಬೇರೆ ಬೇರೆ ಆರೋಗ್ಯ ತಜ್ಞರನ್ನು ಕರೆದುಕೊಂಡು ಹೋಗಿ ವಿಶ್ವಮಟ್ಟದ ಆರೋಗ್ಯ ಸೆಮಿನಾರ್‌ಗಳಲ್ಲಿ ಪ್ರಬಂಧಗಳನ್ನು ಮಂಡಿಸಿ ಗುಟ್ಕಾ ಬಹಳ ಆರೋಗ್ಯಕ್ಕೆ ಹಾನಿಕರ ಎಂದು ಪ್ರತಿಬಿಂಬಿಸುವ ಕೆಲಸ ಮಾಡುತ್ತಿದೆ. ಇದು ದುರುದ್ದೇಶಪೂರಿತವಾದುದಾಗಿದೆ. ಅಡಿಕೆ ಬೆಳೆಗಾರರಿಗೆ ಇದರಿಂದ ಅನಾನುಕೂಲವಾಗುತ್ತದೆ. ಬೆಳೆಗಾರರನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರ ಇದನ್ನು ಕೈಬಿಡಬೇಕು. ನಿನ್ನೆ ಮಂಡಿಸಿದ ಬಜೆಟ್‌ನಲ್ಲಿ ಸರ್ಕಾರ ಅಡಿಕೆ ಬೆಳೆಗಾರರಿಗೆ ಅನುಕೂಲವಾಗುವಂತಹ ಎರಡು ಒಳ್ಳೆಯ ಕೆಲಸಗಳನ್ನು ಪ್ರಕಟಿಸಿದೆ. ಪಕ್ಷಬೇಧವಿಲ್ಲದೆ ನಾವು ಅದನ್ನು ಸ್ವಾಗತ ಮಾಡಬೇಕಾಗುತ್ತದೆ. ಇದರಿಂದ ಒಂದೆರಡು ಸಾವಿರ ರೂಪಾಯಿಗಳಷ್ಟಾದರೂ ಅಡಿಕೆ ರೇಟ್ ಜಾಸ್ತಿಯಾಗಬಹುದು ಎಂದು ನಾನು ಅಂದುಕೊಂಡಿದ್ದೇನೆ. ಸರ್ಕಾರ ಇವತ್ತು ಗುಟ್ಕಾಗೆ ಟ್ಯಾಕ್ಸ್ ಹಾಕಿ ಅಡಿಕೆ ಬೆಳೆಗಾರರ ಕುತ್ತಿಗೆ ಹಿಚುಕುವಂತಹ ಕೆಲಸ ಮಾಡಬಾರದು. ಅಡಿಕೆ ಬೆಳೆಗಾರರ ರಾಜ್ಯವಾಗಿ ಬೆಳೆಗಾರರನ್ನು ರಕ್ಷಣೆ ಮಾಡುವಂತಹ ದೃಷ್ಟಿಯಿಂದ ಅದಕ್ಕೆ ಪೂರಕವಾಗಿ ಏನೇನು ಕೆಲಸಗಳನ್ನು ನಾವು ಮಾಡಬೇಕೋ ಅದನ್ನು ಮಾಡುವುದರ ಮೂಲಕ ಸರ್ಕಾರ ಅವರಿಗೆ ಶಕ್ತಿ ತುಂಬುವಂತಹ ಕೆಲಸವನ್ನು ಮಾಡಬೇಕು. ಹಾಗೆಂದ ಮಾತ್ರಕ್ಕೆ ಯಾರದೋ ಆರೋಗ್ಯಕ್ಕೆ ಹಾನಿ ಮಾಡಬೇಕೆಂದು ನಾವಂತೂ ಹೇಳುವುದಿಲ್ಲ. ನಾವೆಲ್ಲಾ ರೈತರೇ, ಯಾರಿಗಾದರೂ ವಿಷ ಕುಡಿಸಿ ಹಣ ಮಾಡುವಂತಹ ಪೈಕಿ ನಾವಲ್ಲ. ವಿಷಯುಕ್ತವಾಗಿರುವಂತಹ ವಸ್ತುಗಳು ಅಥವಾ ಇನ್‌ಗ್ರೇಡಿಯಂಟ್ಸ್ ಏನಿದೆ, ಅವುಗಳನ್ನು ತೆಗೆಸುವ ವ್ಯವಸ್ಥೆ ಮಾಡಿ ಎಂದು ನಾವು ಹೇಳಿದ್ದೇವೆ. ಮೊದಲಿನಿಂದಲೂ ಕೂಡ ನಮ್ಮವಾದ ಅದೇ ಆಗಿದೆ. ಇಂತಹ ವಸ್ತುಗಳನ್ನು ಗುಟ್ಕಾದಲ್ಲಿ ಸೇರಿಸಬಾರದು, ಸೇರಿಸಿದರೆ ಅಂತಹವರಿಗೆ ಶಿಕ್ಷೆ ಕೊಡುತ್ತೇವೆ ಎಂಬ ಕಾನೂನನ್ನು ಸರ್ಕಾರ ಮಾಡಲಿ. ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ್‌ರವರು ಹೇಳಿದಂತೆ ಗುಟ್ಕಾ ಪ್ಯಾಕೆಟ್ ಮೇಲೆ ಅದರಲ್ಲಿ ಏನೇನು ಇನ್‌ಗ್ರೇಡಿಯಂಟ್ಸ್ ಇವೆ ಎಂಬುದನ್ನು ಕಂಪನಿಗಳು ನಮೂದಿಸಲಿ. ನಾವು ಅಡಿಕೆ ಬೆಳೆಗಾರರ ರಾಜ್ಯವಾಗಿ ಬೇರೆ ಬೇರೆ ರಾಜ್ಯಗಳಿಗೆ ಮಾರ್ಗದರ್ಶಿಯಾಗಿರಬೇಕು. ಗುಟ್ಕಾದಲ್ಲಿ ವಿಷಯುಕ್ತವಾಗಿರುವಂತಹ ವಸ್ತುಗಳನ್ನು ಸೇರಿಸದಂತೆ ಮಾಡಲು ನಾವು ಕಾನೂನನ್ನು ತಂದಿದ್ದೇವೆ ಎಂದು ನಾವು ಬೇರೆಯವರಿಗೆ ಹೇಳಿಕೊಡುವಂತೆ ಸರ್ಕಾರ ನಡೆದುಕೊಳ್ಳಬೇಕು. ಒಂದು ವೇಳೆ ಕೇಂದ್ರ ಏನಾದರೂ ನಾವು ಗುಟ್ಕಾ ಬ್ಯಾನ್ ಮಾಡುತ್ತೇವೆ ಎಂದು ಹೊರಟರೆ ನಾವೂ ಕೂಡ ಅದೇ ರೀತಿ ಮಾಡಲಿಕ್ಕೆ ಹೊರಟರೆ ಸರಿಯಾಗುವುದಿಲ್ಲ. ಆ ರೀತಿ ಮಾಡದಂತೆ ಕರ್ನಾಟಕ, ಗೋವಾ ಮತ್ತು ಕೇರಳ ರಾಜ್ಯಗಳು ಕೇಂದ್ರಕ್ಕೆ ಹೇಳಬೇಕಾಗುತ್ತದೆ. ಅಡಿಕೆ ಸಾಕಷ್ಟು ಬೆಳೆಯುವಂತಹ ರಾಜ್ಯಗಳು ಈ ಮಾತನ್ನು ಕೇಂದ್ರಕ್ಕೆ ಹೇಳಲೇಬೇಕಾಗುತ್ತದೆ. ರೈತರ ಹಿತದೃಷ್ಟಿಯಿಂದ ಗುಟ್ಕಾ ಮೇಲೆ ಟ್ಯಾಕ್ಸ್ ಅನ್ನು ಜಾಸ್ತಿ ಮಾಡಲಿಕ್ಕೆ ತಂದಿರುವ ವಿಧೇಯಕವನ್ನು ವಾಪಸ್ ತೆಗೆದುಕೊಳ್ಳಿ ಎಂದು ಅಡಿಕೆ ಬೆಳೆಗಾರರ ಪರವಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

+ಶ್ರೀ ವೈ.ಕೆ. ರಾಮಯ್ಯ (ಹುಲಿಯೂರು ದುರ್ಗ) : ಮಾನ್ಯ ಅಧ್ಯಕ್ಷರೇ, ಚರ್ಚೆಯ ವಿಶೇಷತೆಯನ್ನು ನೋಡಿ ನಾನೂ ಕೂಡ ಮಾತನಾಡಬೇಕೆಂಬ ಉತ್ಸಾಹ ಬಂದಿದೆ. ಎದುರು ಭಾಗದಲ್ಲಿರುವಂತಹ ನನ್ನ ಸ್ನೇಹಿತರು ಗುಟ್ಕಾ ಮಾರಾಟ ಮಾಡುವುದು ಅಡಿಕೆ ಬೆಳೆಗಾರರ ದೃಷ್ಟಿಯಿಂದ ಅಗತ್ಯ ಎಂದು ಪ್ರತಿಪಾದನೆ ಮಾಡುತ್ತಿದ್ದಾರೆ. ಜೊಮ್ಯಾಟೋ ಬೆಳೆಯುವವರು ಗುಟ್ಕಾ ಬೇಡ ಎಂದು ಹೇಳುತ್ತಿದ್ದಾರೆ. ಮನುಷ್ಯನ ಪರಿಸ್ಥಿತಿ ಎಲ್ಲವನ್ನೂ ಮೀರಿ ಎಂತಹ ಒತ್ತಡಕ್ಕೆ ನಮ್ಮನ್ನು ದೂರುತ್ತದೆ ಎಂಬುದಕ್ಕೆ ಒಂದು ಘಟನೆ ಜ್ಞಾಪಕಕ್ಕೆ ಬರುತ್ತಿದೆ. ಶ್ರೀರಾಮಚಂದ್ರ ಹೆಂಡತಿಯನ್ನು ಕಳೆದುಕೊಂಡು ಅವಳಿಗಾಗಿ ಕಾಡಿನಲ್ಲೆಲ್ಲಾ ತಿರುಗುತ್ತಿದ್ದನಂತೆ. ವಾಲಿಯ ಹೆಂಡತಿಯನ್ನು ಸುಗ್ರೀವ ಹೊತ್ತುಕೊಂಡು ಹೋಗಿ ಅವನೂ ಹೆಂಡತಿಯನ್ನು ಕಳೆದುಕೊಂಡಿರುತ್ತಾನೆ. ಅದನ್ನು ಕವಿ 'ದುಃಖಿಗೆ ದುಃಖಿ ಸರಂ' ಎಂದು ಹೇಳುತ್ತಾನೆ. ಕಷ್ಟ ಮನುಷ್ಯನನ್ನು ಎಂತಹ ಪರಿಸ್ಥಿತಿಗೆ ದೂಡುತ್ತದೆ ಎಂದರೆ ಅಡಿಕೆ ಬೆಳೆಗಾರರೆಲ್ಲಾ ಪಕ್ಷಬೇಧವಿಲ್ಲದೆ ತಮಗೆ ಗುಟ್ಕಾ ಬೇಕೇ ಬೇಕು ಎಂದು ಪ್ರತಿಪಾದಿಸುತ್ತಿದ್ದಾರೆ. ಕಷ್ಟದ ಪರಿಸ್ಥಿತಿಯಲ್ಲಿರುವಂತಹ ನಮ್ಮ ಅಡಿಕೆ ಬೆಳೆಗಾರರಿಗೆ ಪರಿಹಾರ ಸಿಕ್ಕುವಂತಹ ವ್ಯವಸ್ಥೆಗೆ ನನ್ನದೂ ಕೂಡ ಬೆಂಬಲ ಇದೆ. ಗುಟ್ಕಾಗೆ ತೆರಿಗೆಯನ್ನು ಹಾಕಲೇಬೇಕು. ಇದನ್ನು ಇನ್ನೂ ಸ್ವಲ್ಪ ಜಾಸ್ತಿ ಮಾಡಿ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತೆರಿಗೆ ಜಾಸ್ತಿಯಾದರೆ ಗುಟ್ಕಾ ಸೇವನೆ ಮಾಡುವುದು ಕಡಿಮೆ ಆಗುತ್ತದೆ. ಆರೋಗ್ಯಕ್ಕೆ ಹಾನಿಕರ ಎಂದು ಬರೆದಿದ್ದರೂ ಕೂಡ ನಾವು ಸಿಗರೇಟ್ ಅನ್ನು ಸೇದುತ್ತಲೇ ಇದ್ದೇವೆ. ಆದ್ದರಿಂದ ಗುಟ್ಕಾದ ಮೇಲೆ ಟ್ಯಾಕ್ಸ್ ಅನ್ನು ಕಡಿಮೆ ಮಾಡುವುದು ಬೇಡ, ಜಾಸ್ತಿ ಮಾಡಿ ಎಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ನಮ್ಮ ಅಭಿವೃದ್ಧಿ ಕಾರ್ಯಗಳಿಗೆ ಲಭ್ಯವಿರುವಂತಹ ಹಣದ ಪ್ರಮಾಣ ಇವತ್ತು ಕೇವಲ ಶೇಕಡ 30ಕ್ಕೆ ಬಂದು ನಿಂತಿದೆ. ಆದ್ದರಿಂದ ಇಂತಹದ್ದರ ಮುಖಾಂತರವಾದರೂ ಕೂಡ ನಾವು ನಮ್ಮ ಬೊಕ್ಕಸವನ್ನು ತುಂಬಿಸಿಕೊಳ್ಳಬೇಕಾಗುತ್ತದೆ.

1.00 ಪಿ.ಎಂ.

ಅಡಿಕೆ ಬೆಳೆಯುವವರಿಗೆ ಬೆಲೆ ಸಿಗದೆ ಇರುವ ಕಷ್ಟ, ಇಬ್ಬರೂ ಕಷ್ಟದಲ್ಲಿರುವುದರಿಂದ ನಮ್ಮಂತಹ ದುಃಖಿಗಳಿಗೆ ನೆರವಾಗುತ್ತಿದ್ದಾರೆ, ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

+ಶ್ರೀ ವಡ್ನಾಳ್ ರಾಜಣ್ಣ (ಚನ್ನಗಿರಿ) : ಕರ್ನಾಟಕ ರಾಜ್ಯದಲ್ಲಿ ಸುಮಾರು 8 ರಿಂದ 10 ಜಿಲ್ಲೆಗಳಲ್ಲಿ ಅಡಿಕೆಯನ್ನು ಬೆಳೆಯುತ್ತಿದ್ದಾರೆ. ಇವತ್ತು ರಾಜ್ಯದಲ್ಲಿ ಎಲ್ಲ ಕೃಷಿ ಉತ್ಪನ್ನಗಳ ಬೆಲೆ ಕುಸಿದಿರುವುದನ್ನು ನಾವು ಕಾಣುತ್ತಿದ್ದೇವೆ. ಕೇವಲ ಅಡಿಕೆ ಧಾರಣೆ ಮಾತ್ರ ತಕ್ಕ ಮಟ್ಟಿಗೆ ಪರವಾಗಿಲ್ಲ, ಎನ್ನುವ ಪರಿಸ್ಥಿತಿ ಇದೆ. ಅದು ಸಹ ಕುಸಿಯುವಂಥ ಸಂದರ್ಭದಲ್ಲಿ ಕೆಲವು ರಿಯಾಯಿತಿಗಳನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ಮಾತನಾಡಿ ಆದಕ್ಕೆ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಈ ಬಜೆಟ್‌ನಲ್ಲಿ ಅದಕ್ಕೆ ಸಂಬಂಧಪಟ್ಟ ಹಾಗೆ ಬಹು ಹಂತ ಶುಲ್ಕವನ್ನು ಏಕ ಹಂತಕ್ಕೆ ತರತಕ್ಕಂತಹ ಮಹತ್ತರವಾದ ಕೆಲಸ ಮಾಡುತ್ತಿದ್ದಾರೆ. ಸುಮಾರು 1985ನೇ ಇಸವಿಯಿಂದ ಬಹು ಹಂತ ಸುಂಕವನ್ನು ಹಾಕುತ್ತಿದ್ದರು. 15 ವರ್ಷಗಳ ಕಾಲ 8 ರಿಂದ 10 ಜನ ಮುಖ್ಯ ಮಂತ್ರಿಗಳು ಹೋದರು. ಅದನ್ನು ಮಾಡುವ ಕೆಲಸ ಮಾಡಿರಲಿಲ್ಲ.

ಈಗಿನ ಮುಖ್ಯ ಮಂತ್ರಿಗಳು ಬಹು ಹಂತ ಶುಲ್ಕವನ್ನು ಏಕ ಹಂತಕ್ಕೆ ತರುವ ಮಹತ್ತರವಾದ ಕೆಲಸ ಮಾಡಿದ್ದಾರೆ. ಅವರಿಗೆ ಅಡಿಕೆ ಬೆಳೆಗಾರರ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. ಅದೇ ರೀತಿ ಮಾರಾಟ ತೆರಿಗೆ ಸಹ ನಾಲ್ಕು ಪರ್ಸೆಂಟ್ ಏನಿದೆ ಅದನ್ನು ಉಳಿಸತಕ್ಕಂತಹ ಕೆಲಸ ಮಾಡಿದ್ದಾರೆ, ಜೊತೆಗೆ ಪಶ್ಚಿಮವಾಹಿನಿ ತೆರಿಗೆಗೆ ವಿನಾಯಿತಿ ಕೊಡತಕ್ಕಂತಹ ಕೆಲಸ ಮಾಡಿದ್ದಾರೆ. ಅದಕ್ಕೂ ಸಹ ಅಭಿನಂದನೆ ಸಲ್ಲಿಸುತ್ತೇನೆ. ನಮ್ಮ ಸ್ನೇಹಿತರು ಗುಟ್ಕಾವನ್ನು ನಿಷೇಧ ಮಾಡಬೇಕೆಂದು ಹೇಳಿದರು. ಗುಟ್ಕಾ ನಿಷೇಧ ಮಾಡಬೇಕೆಂದು ಹೇಳುತ್ತಾರೆ, ನಿಷೇಧ ಮಾಡಿದ ಮೇಲೆ ನಿಷೇಧ ಮಾಡಬೇಡಿ ಎಂದು ಅವರೇ ಹೇಳುತ್ತಾರೆಂದು ನಾನು ಹೇಳುತ್ತೇನೆ. ನನಗೆ ನೋಡಿ ಆದ ತಕ್ಷಣ ಮೂಗನ್ನು ಕತ್ತರಿಸಿ ಹಾಕಬೇಕೆನ್ನುವ ಮಾತು ಕಾಣಿಸುತ್ತದೆ. ಗುಟ್ಕಾದಲ್ಲಿ ಸುಮಾರು 90 ಪರ್ಸೆಂಟ್ ಅಡಿಕೆ ಉಪಯೋಗಿಸುತ್ತಾರೆ. ಇನ್ನು ಉಳಿದ 10 ಪರ್ಸೆಂಟ್‌ನಲ್ಲಿ ಬೇರೆ ಬೇರೆ ಪದಾರ್ಥಗಳನ್ನು ಉಪಯೋಗಿಸುತ್ತಾರೆ. ವೈಜ್ಞಾನಿಕವಾಗಿ ಯಾವುದೇ ತರಹದ ಪರೀಕ್ಷೆ ಮಾಡಿ ಆರೋಗ್ಯಕ್ಕೆ ಯಾವುದೇ ತರಹ ಹಾನಿಕರವಾಗುತ್ತದೆ ಎಂದು ಅದನ್ನು ತೆಗೆದರೆ ನಾವು ಪ್ರಶ್ನೆ ಮಾಡುವಂಥದ್ದು ಏನು ಇಲ್ಲ. ಆದರೆ ಇವತ್ತು ಗುಟ್ಕಾ ತಿನ್ನುವುದರಿಂದ ಆರೋಗ್ಯಕ್ಕೆ ಸಂಪೂರ್ಣ ಹಾನಿಕರವಾಗಿದೆ ಎಂದು ನಾವು ಒಪ್ಪಿ ಕೊಳ್ಳುವುದಕ್ಕಾಗುವುದಿಲ್ಲ. ನಾವು ತೆಗೆದುಕೊಳ್ಳತಕ್ಕಂತಹ ಆಹಾರ ಏನಿದೆ, ಒಂದು ಚಪಾತಿ ತಿನ್ನುವವರು 10 ಚಪಾತಿ ತಿಂದರೆ ಅದೂ ಸಹ ಆರೋಗ್ಯಕ್ಕೆ ಹಾನಿಕರವಾಗುತ್ತದೆ. ಒಂದು ಗುಟ್ಕಾ ತಿನ್ನುವವರು 10-20 ಗುಟ್ಕಾ ತಿಂದರೆ ಆರೋಗ್ಯಕ್ಕೆ ಹಾನಿಯಾಗುತ್ತದೆ. ಹಾಗಾಗಿ ಗುಟ್ಕಾ ನಿಷೇಧ ಮಾಡಬೇಕೆನ್ನುವ ವಿಚಾರ ಸಾಧುವಾದುದು ಅಲ್ಲ. ಸಾಕಷ್ಟು ಜನರು ಇದರಲ್ಲಿ ತೊಡಗಿದುವುದರಿಂದ ಗುಟ್ಕಾವನ್ನು ನಿಷೇಧ ಮಾಡುವ ಪರಿಸ್ಥಿತಿ ಇಲ್ಲ. ಅಡಿಕೆ ಬೆಳೆಗಾರರ ರಕ್ಷಣೆ ಮಾಡತಕ್ಕಂತಹ ಸಂದರ್ಭದಲ್ಲಿ ಗುಟ್ಕಾ ನಿಷೇಧ ಮಾಡದೆ ಅದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೇಳಿ, ಈಗ ತಂದಿರುವ ವಿಧೇಯಕ ಹೊಸದಾಗಿ ತಂದಿರತಕ್ಕಂಥದ್ದು ಏನು ಇಲ್ಲ. ಮಾರಾಟ ತೆರಿಗೆ ಇರತಕ್ಕಂಥದ್ದನ್ನು ಪರಿವರ್ತನೆ ಮಾಡಿ ಬೇರೆ ಹೆಸರನ್ನು ಹಾಕುವುದರ ಮೂಲಕ ಇರತಕ್ಕಂತಹ 20 ಪರ್ಸೆಂಟ್‌ಗೆ ತೆರಿಗೆ ಹಾಕುವುದಕ್ಕೆ ಏನು ವಿಧೇಯಕ ತಂದಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ.

+ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಮ್ಮ ಮೇಲೆ ತಪ್ಪು ಕಲ್ಪನೆ ಬರುತ್ತಿದೆ. ನಾವು ಅಡಿಕೆ ಬೆಳೆಗಾರರ ವಿರೋಧಿಗಳೆಂಬ ಭಾವನೆ ಬರುತ್ತಿದೆ. ಆ ಮೇಲೆ ಯಾವುದೋ ಸಿಗರೇಟ್ ಲಾಬಿ ಪರ ಇಲ್ಲಿ ವಾದ ಮಾಡುವುದಕ್ಕೆ ಬಂದಿದ್ದೇವೆ, ಎಂಬ ಈ ಎಲ್ಲಾ ಕಲ್ಪನೆಗಳು ಬರುತ್ತಿವೆ. 1997ರಲ್ಲಿ ರಾಜ್ಯ ಸರ್ಕಾರ ಡಾ|| ಹೆಚ್. ನರಸಿಂಹಯ್ಯನವರ ನೇತೃತ್ವದಲ್ಲಿ ಒಂದು ಸಮಿತಿ ನೇಮಿಸಿತ್ತು. ಅದರ ಒಂದು ವಾಕ್ಯವನ್ನು ಓದುತ್ತೇನೆ. "ನಾವು 50ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿದ್ದೇವೆ. ಇಂದು ಒಂದು ದೇಶವನ್ನು ನಾಶ ಪಡಿಸಬೇಕಾದಲ್ಲಿ ಪರಮಾಣು ಬಾಂಬ್ ಇಲ್ಲವೇ ಪರಮಾಣು ಅಸ್ತ್ರಗಳ ಅವಶ್ಯಕತೆ ಕಂಡುಬರುವುದಿಲ್ಲ. ಕೇವಲ ದೇಶದ ಯುವ ಜನರನ್ನು ಗುಟ್ಕಾ ಸೇವನೆಗೆ ಗುರಿ ಮಾಡಿದರೆ ಸಾಕು, ಇದರಿಂದ ಇಡೀ ರಾಷ್ಟ್ರವು ಕಾಲಕ್ರಮೇಣ ನೋವು ಗ್ರಸ್ತವಾಗಿ ಕಾಯಿಲೆಯಿಂದ ನರಳಿ ಬಳಲುತ್ತು ನಿಷ್ಕ್ರಿಯವಾಗಿ ಸರ್ವನಾಶವಾಗುತ್ತದೆ. ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಇಂದಿನ ಶಾಸಕರು, ಇಂದಿನ ಜನಾಂಗಕ್ಕೆ ಮತ್ತು ಈ

ನಾಡಿದ ಭಾವಿ ಜನಾಂಗಕ್ಕೆ ನೀಡಬೇಕಾಗಿರುವ ಒಂದೇ ಒಂದು ಕಾಣಿಕೆ ಎಂದರೆ, ಈ ಗುಟ್ಕಾ ಮತ್ತು ಸಂಬಂಧಪಟ್ಟಂತಹ ವಸ್ತುಗಳ ತಯಾರಿಕೆ ಮತ್ತು ಮಾರಾಟ ನಿಷೇಧ ಕುರಿತು ಶಾಸನವನ್ನು ಹೊರಡಿಸುವುದಾಗಿದೆ. ಹಾಗೂ ಈ ನಿಟ್ಟಿನಲ್ಲಿ ಶಾಸನವನ್ನು ಜಾರಿಗೊಳಿಸಿದರೆ ಇಂದಿನ ಯುವ ಜನ ಮತ್ತು ಸಮಾಜ ಪುರೋಗಮನದ ದಿಕ್ಕಿನಲ್ಲಿ ಹೋಗುವುದಕ್ಕೆ ಸಾಧ್ಯವಾಗುತ್ತದೆ." ಈ ಒಂದು ಮಾತನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : 1997ನೇ ಇಸವಿಯಲ್ಲಿ ನಾವು ಅಡಿಕೆ ಬೆಳೆಗಾರರ ಪರವಾಗಿ ಒಂದು ಡೆಲಿಗೇಷನ್ ತೆಗೆದುಕೊಂಡು ಕ್ಯಾಂಪ್ಕೋ ಮತ್ತು ಬೇರೆ ಇನ್ನಿತರ ಸಂಘ ಸಂಸ್ಥೆಗಳಿಂದ ಬಂದ ನಾಯಕರನ್ನು ಕರೆದುಕೊಂಡು ಡಾ।। ನರಸಿಂಹಯ್ಯನವರ ಹತ್ತಿರ ಕರೆದುಕೊಂಡು ಹೋಗಿದ್ದೆವು. ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗಿತ್ತು, ಡಾ।। ನರಸಿಂಹಯ್ಯನವರು ತುಂಬ ದೊಡ್ಡ ಮನುಷ್ಯರು. ಅವರ ಬಗ್ಗೆ ನಮಗೂ ಅಪಾರವಾದ ಗೌರವ ಇದೆ. ದಯವಿಟ್ಟು ತಾವು ವಿಚಾರ ಮಾಡಿ. ಅಡಿಕೆ ಬೆಳೆಗಾರರ ದೃಷ್ಟಿಯಿಂದ ಇನ್‌ಗ್ರೇಡಿಯಂಟ್ಸ್‌ನ್ನು ಬ್ಯಾನ್ ಮಾಡಿಲಿಕ್ಕೆ ಏನೂ ತೊಂದರೆ ಇಲ್ಲ. ನಾವು ವಿಸ್ತಾರವಾಗಿ ಓದಿ ಚರ್ಚೆ ಮಾಡಿ ಈ ವಿಷಯ ಅಡಿಕೆ ಬೆಳೆಗಾರರ ಮೇಲೆ ದುಷ್ಪರಿಣಾಮ ಆಗುವುದರಿಂದ ಹಾಗೂ ಇದು ಸೂಕ್ಷ್ಮವಾದ ವಿಚಾರ ಕೂಡ ಆಗಿದೆಯೆಂದು ಅವರಿಗೆ ತಿಳಿಸಿದೆವು. ವಿಷ ತಿನ್ನುವ ಕೆಲಸವನ್ನು ಯಾವ ರೈತರು ಮಾಡುವುದಿಲ್ಲ. ಆರೋಗ್ಯದ ದೃಷ್ಟಿಯಿಂದ ಏನಾಗುತ್ತದೆ, ಬೆಳೆಗಾರರ ದೃಷ್ಟಿಯಿಂದ ಏನಾಗುತ್ತದೆ, ಲ್ಯಾಬ್‌ನಲ್ಲಿ ಟೆಸ್ಟ್ ಮಾಡಿ ಅದನ್ನು ಕೂಲಂಕುಷವಾಗಿ ವಿಚಾರ ಮಾಡಬೇಕೆಂದು ಅವರಿಗೆ ಹೇಳಿದೆವು. ಆಗ ಅವರು ನಾವಿನ್ನೂ ಮೀಟಿಂಗ್ ಮಾಡಿಲ್ಲ, ನಿಮ್ಮನ್ನೂ ಕೂಡ ಕೇಳಿ ಕನ್‌ಸಿಡರ್ ಮಾಡುತ್ತೇವೆಂದು ಹೇಳಿದ್ದರು. ನಾಲ್ಕನೇ ದಿವಸಕ್ಕೆ ನಾವುಗಳು ಆರೋಗ್ಯ ಸಚಿವರ ಮನೆಗೆ ಹೋದರೆ ಯಾವ ಡಾ।। ನರಸಿಂಹಯ್ಯನವರು ನಮ್ಮ ಅಭಿಪ್ರಾಯ ತೆಗೆದುಕೊಳ್ಳಲು ಮೀಟಿಂಗ್ ಮಾಡುತ್ತೇವೆಂದು ಹೇಳಿದ್ದರು, ಅವರು ಯಾರನ್ನೂ ಹೀಯರ್ ಮಾಡದೆ ಎಲ್ಲೂ ಪ್ರವಾಸ ಮಾಡದೆ, ಯಾವುದೇ ಲ್ಯಾಬ್‌ನಲ್ಲಿ ಟೆಸ್ಟ್ ಮಾಡಿಸದೆ ಈ ರೀತಿಯ ಯಾರೋ ಹೇಳಿಕೆ ಕೊಟ್ಟಿರತಕ್ಕಂಥದ್ದನ್ನು ನಂಬಿ ಅಂತಹ ವರದಿಯನ್ನು ಕೊಟ್ಟರೆ ಅದನ್ನು ಜಾರಿಗೆ ತಂದರೆ ಏನು ಅನಾಹುತವಾಗುತ್ತದೆ ಎಂದು ಇಲ್ಲಿ ಹೇಳಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಡಾ।। ನರಸಿಂಹಯ್ಯನವರು 1997ರಲ್ಲಿ ಈ ವರದಿಯನ್ನು ಕೊಟ್ಟಿದ್ದಾರೆ. ಅವರ ಅನುಭವದ ಆಧಾರದ ಮೇಲೆ ಕೊಟ್ಟಿದ್ದಾರೆ. ತಮಗೆ ಬೇಕಾದ್ದನ್ನು ತಾವು ಹೇಳಿಕೊಳ್ಳಿ but Don't cast aspersions on a man who has got some integrity and who is impartial. ಇವತ್ತು ನಮಗೆ ಹಣ ಬೇಕುಂತ ಇದನ್ನು ಹಾಕಿರಬಹುದು, ನಾವು ಎಲ್ಲವೂ ಸರಿ ಇದೆ ಎಂದು ಸಮರ್ಥನೆ ಮಾಡಿಕೊಳ್ಳುತ್ತಿಲ್ಲ.

ಶ್ರೀ ಸಿ. ಬೈರೇಗೌಡ : ಇದೇ ಸಂದರ್ಭದಲ್ಲಿ ಚೈನ ದೇಶದಲ್ಲಿ ಏನು ನಡೆಯಿತು ಎಂದು ಹೇಳುತ್ತೇನೆ. Opium has destroyed the entire country. ಒಂದು ಕಾಲದಲ್ಲಿ ಅತಿ ಉನ್ನತ ಸ್ಥಾನಕ್ಕೆ ಬೆಳೆದಿದ್ದಂಥ ರಾಷ್ಟ್ರ ಚೈನ ದೇಶ. ಅದರಲ್ಲಿ ಜಯಿಸಲಿಕ್ಕೆ ಸಾಧ್ಯವಾಗಲಿಲ್ಲ, ಅದಕ್ಕೆ ನೇರವಾಗಿ opium ಅನ್ನು ತಂದಿಟ್ಟು ಇಡೀ ದೇಶವನ್ನು ಆಕ್ರಮಣ ಮಾಡಿದ್ದು ಚರಿತ್ರೆಯಲ್ಲಿ

ನಮೂದಾಗಿದೆ. ಅದು ಯಾವುದರಿಂದ ನಡೆಯಿತು ಎಂದರೆ, ಈ ಮತ್ತು ಬರುವ Opium ನಿಂದ ಅದು ಸಾಧ್ಯವಾಯಿತು. ಬಲವಂತವಾಗಿ ಯಾವುದು ಮಾಡುವುದಕ್ಕಾಗಲಿಲ್ಲ, ಅಂತಹ ರಾಷ್ಟ್ರವನ್ನು ಇಂಟಾಕ್ಸಿಕೇಷನ್ ಮೂಲಕ ಟ್ರಾನ್ಸ್‌ಫೆರ್ ಮಾಡುವುದಕ್ಕೆ ಸಾಧ್ಯವಾಯಿತು. ಇದು ಕೂಡ ಚರಿತ್ರೆಯಲ್ಲಿದೆ.

ಶ್ರೀ ಎಂ. ಶಿವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಗುಟ್ಕಾ ವಿಚಾರದಲ್ಲಿ ನೀಡಿದಂತಹ ಸಲಹೆ ಸೂಚನೆಗಳು ಬಹಳ ಸ್ವಾರಸ್ಯಕರವಾಗಿದ್ದರೂ ಕೂಡ ಒಂದು ಅಭಿಪ್ರಾಯಕ್ಕೆ ನಾನು ಬರುವುದೇನೆಂದರೆ, ಇಲ್ಲಿ ಸರ್ಕಾರ ಈ ಬಗ್ಗೆ ಜಾಸ್ತಿ ಮಾಡಿ ತೆರಿಗೆ ಸಂಗ್ರಹಣೆ ಮಾಡುತ್ತೆ ಎಂದು ಅಲ್ಲ, ಇಲ್ಲಿ ಪ್ರಶ್ನೆಗಳು ಬಂದಿರುವುದು ಈಗ ಶೇಕಡ 16ರಷ್ಟು ಮಾರಾಟ ತೆರಿಗೆ, ನಾಲ್ಕರಷ್ಟು ವಿಲಾಸ ತೆರಿಗೆ ಅಂತ ಹೇಳಿ ಒಟ್ಟು 20 ಪರ್ಸೆಂಟ್ ಕಲೆಕ್ಟ್ ಮಾಡುತ್ತಿದ್ದೇವೆ. ಆಂಧ್ರಪ್ರದೇಶ ಸರ್ಕಾರ ಆಂಧ್ರಪ್ರದೇಶದಲ್ಲಿ ಕೊಡಾರಿ ಪ್ರಾಡಕ್ಟ್‌ನವರು ಸುಪ್ರೀಂ ಕೋರ್ಟಿನಲ್ಲಿ ಒಂದು ಮೊಕದ್ದಮೆ ಹೂಡಿದರು. ಇದು ಅಡಿಕೆ ತಂಬಾಕು ಮತ್ತಿತರೆ ವಸ್ತುಗಳಿಂದ ಮಾಡಿದ್ದರೂ ಅದರಲ್ಲಿ ಪ್ರಮುಖವಾಗಿ ಅಡಿಕೆಯಾಗಿದ್ದರೂ ಕೂಡ ಕೇಂದ್ರ ಸರ್ಕಾರ ಅಬಕಾರಿ ಸುಂಕದ ನೀತಿ ಅಡಿಯಲ್ಲಿ ಬರುತ್ತದೆ ಕೇಂದ್ರ ಸರ್ಕಾರದ ಅಬಕಾರಿ ಸುಂಕಕ್ಕೆ ಬರುತ್ತದೆ. ಹಾಗಾಗಿ ಮಾರಾಟ ತೆರಿಗೆ ವಿಧಿಸುವುದಕ್ಕೆ ಬರುವುದಿಲ್ಲವೆಂದು. ಸುಪ್ರೀಂ ಕೋರ್ಟಿನಲ್ಲಿ ದಾವೆ ಹೂಡಿದ ಮೇಲೆ ಸುಪ್ರೀಂ ಕೋರ್ಟ್‌ನವರು ಒಂದು ಆದೇಶ ನೀಡಿದ ಮೇಲೆ ಇದರ ಮೇಲೆ ಮಾರಾಟ ತೆರಿಗೆ ಹಾಕುವುದಕ್ಕೆ ಬರುವುದಿಲ್ಲ, ಆದ್ದರಿಂದ ಇದನ್ನು ತಡೆಹಿಡಿಯಬೇಕೆಂದು ಹೇಳಿದ್ದರಿಂದ ಈ ಆದೇಶ ಎಲ್ಲ ರಾಜ್ಯಗಳಿಗೂ ಅನ್ವಯವಾಗುವ ರೀತಿಯಲ್ಲಿ ಆಗುತ್ತದೆ. ಈ ದಿಶೆಯಲ್ಲಿ ಇದನ್ನು ಮಾರಾಟ ತೆರಿಗೆ ಬದಲಿಗೆ ವಿಲಾಸ ತೆರಿಗೆ ಎಂದು ಕನ್‌ವರ್ಷನ್ ಮಾಡಿ ಕಲೆಕ್ಟ್ ಮಾಡಬೇಕಾಗಿದೆ. ಇದು ಹಿಂದೆ ಕೂಡ ಇತ್ತು, ಇವತ್ತೂ ಇದೆ, ನಾಳೆಯೂ ಇರುತ್ತದೆ. ಈ ಗುಟ್ಕಾ ವ್ಯವಸ್ಥೆ ಇಡೀ ರಾಷ್ಟ್ರದಲ್ಲಿಯೇ ಇದೆ. ಇದನ್ನು ನಿಷೇಧ ಮಾಡಬೇಕಾದರೆ ರಾಷ್ಟ್ರವ್ಯಾಪ್ತಿಯಲ್ಲಿಯೇ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಹಲವಾರು ಸದಸ್ಯರುಗಳು ಹೇಳಿದ ಹಾಗೆ ಅಡಿಕೆ, ತಂಬಾಕುಗಳಲ್ಲಿ ಮತ್ತು ಬರಿಸುವ ಪದಾರ್ಥವನ್ನು ಸೇರಿಸುವ ಪ್ರಮಾಣವನ್ನು ತೆಗೆಯಬೇಕೆಂದು ಗುಟ್ಕಾ ತಯಾರಿಸುವ ಕಂಪನಿಗಳಿಗೆ ನಾವು ನೇರವಾಗಿ ಹೇಳುವುದಕ್ಕಾಗುವುದಿಲ್ಲವೆಂದು ಮತ್ತು ಈ ಕೆಲಸವನ್ನು ಬಹುಶಃ ಕೇಂದ್ರ ಸರ್ಕಾರವೇ ಮಾಡಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಇಂದು ಶೇಕಡ 20 ರಷ್ಟು ತೆರಿಗೆಯನ್ನು ವಿಲಾಸ ತೆರಿಗೆಯ ರೂಪದಲ್ಲಿ ಕನ್‌ವರ್ಟ್ ಮಾಡಿ ಕಲೆಕ್ಟ್ ಮಾಡುತ್ತೇವೆ ಎಂದರೆ ಇದರಿಂದ ಅವರಿಗೆ ಡಿಸ್‌ಕರೇಜ್ ಮಾಡಬೇಕೆಂದಾಗಲಿ ಅಥವಾ ಎನ್‌ಕರೇಜ್ ಮಾಡುವಂಥದ್ದಾಗಲೀ ಬರುವುದಿಲ್ಲ. ವಿಲಾಸ ತೆರಿಗೆಯ ರೂಪಕ್ಕೆ ಕನ್‌ವರ್ಟ್ ಮಾಡಿ ತೆರಿಗೆ ವಸೂಲು ಮಾಡುವ ದೃಷ್ಟಿಯಿಂದ ಅಡಿಕೆ ಬೆಳೆಗಾರರು ಆತಂಕ ಪಡುವ ಕಾರಣವಿಲ್ಲ. ಸರ್ಕಾರ ಹೆಚ್ಚು ತೆರಿಗೆಯನ್ನಾಗಲಿ ಅಥವಾ ಕಡಿಮೆ ತೆರಿಗೆಯನ್ನಾಗಲಿ ಇಂದಿನ ವ್ಯವಸ್ಥೆಯಲ್ಲಿ ಹಾಕುತ್ತಿಲ್ಲ. ಇಂದು ಗುಟ್ಕಾವನ್ನು ಸೇವಿಸುವವರು ಬೇರೆ ಬೇರೆ ಮಧ್ಯಮ ವರ್ಗದವರು ಮತ್ತು ಸಣ್ಣ ಕುಟುಂಬದವರೇ ಇರಬಹುದು. ಆದರೆ ಈಗ ವಿಲಾಸ ತೆರಿಗೆ ಎಂದೇ ವಸೂಲು ಮಾಡುತ್ತಿರುವ ಕಾರಣ ಗುಟ್ಕಾವನ್ನು ಇಂದು ಹಾಕತಕ್ಕಂಥವರು ಕೆಲವೇ ಕೆಲವು ಜನರಿರುತ್ತಾರಷ್ಟೆ. ಈ ದೃಷ್ಟಿಯಿಂದಲೇ ಇಂದು ವಿಲಾಸ

ತೆರಿಗೆ ಎಂದು ಕನ್‌ವರ್ಟ್ ಮಾಡಿ ಆರ್ಡಿನೆನ್ಸ್‌ನ್ನು ಸಭೆಯ ಮುಂದೆ ತಂದಿದ್ದೇನೆ. ಈ ಮಸೂದೆಗೆ ಸದನ ಅಂಗೀಕಾರ ನೀಡಬೇಕೆಂದು ಅಧ್ಯಕ್ಷರ ಮೂಲಕ ಸದನಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

2.00 ಪಿ.ಎಂ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2001ರ ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 7ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 7ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 7ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವನ ಅಂಗೀಕಾರ

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, 2001ರ ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ;

"2001ರ ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆಯನ್ನು ನೀಡಲಾಯಿತು) ಈಗ ಸದನವನ್ನು ಮುಂದೂಡಿ ಮತ್ತೆ ಮಧ್ಯಾಹ್ನ 3-00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನ ಮತ್ತೆ ಮಧ್ಯಾಹ್ನ 3-00 ಗಂಟೆಗೆ ಸೇರಲು ನಿಶ್ಚಯಿಸಲಾಯಿತು)

(ಸದನವು ಪುನಃ ಮಧ್ಯಾಹ್ನ 3 ಗಂಟೆ 1 ನಿಮಿಷಕ್ಕೆ ಆರಂಭವಾಯಿತು ಉಪಾಧ್ಯಕ್ಷರು, ಪೀಠವನ್ನು ಅಲಂಕರಿಸಿದ್ದರು)

8. 2001-2002ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಚರ್ಚೆ

ಉಪಾಧ್ಯಕ್ಷರು : ಮಾನ್ಯ ಸದಸ್ಯರಾದ ಸದಾನಂದಗೌಡರು ಮಾತನಾಡುವುದು.

ಶ್ರೀ ಎಸ್. ಸುರೇಶ್ ಕುಮಾರ್ : ಅವರು ಇವತ್ತು ವಿರೋಧ ಪಕ್ಷದ ನಾಯಕರ ಸ್ಥಾನದಿಂದ ಮಾತನಾಡುತ್ತಿದ್ದಾರೆ, ಕೇಳುವುದಕ್ಕೆ ಯಾರಿದ್ದಾರೆ, ಅಧಿಕಾರಿಗಳು ಯಾರಿದ್ದಾರೆ?

ಶ್ರೀ ಎಚ್.ಪಿ. ಮಂಜುನಾಥ್ ಗೌಡ: ತಮ್ಮ ನಾಯಕರು ಮಾತನಾಡುವಾಗ; ತಮ್ಮ ಸಂಖ್ಯೆ: ಎಷ್ಟಿವೆ? ಇದೊಂದು ಮರಂತೆ; ಏನು ಮಾಡಲಾಗುವುದಿಲ್ಲ.

+ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಬಹುಶಃ ಕರ್ನಾಟಕ ಸರ್ಕಾರದ 2001-2002ನೇ ಸಾಲಿನ ಆಯವ್ಯಯದ ಮೇಲೆ ನಾವು ಇವತ್ತು ಚರ್ಚೆಯನ್ನು ಪ್ರಾರಂಭ ಮಾಡುತ್ತಿದ್ದೇವೆ, ಪ್ರಾರಂಭದಲ್ಲಿ ಎರಡು ಮೂರು ವಿಚಾರಗಳನ್ನು ಉಲ್ಲೇಖ ಮಾಡಬೇಕೆಂಬುದು ನನ್ನ ಭಾವನೆ ಒಂದು, ರಾಜ್ಯದ ಸಮಗ್ರ ಚಿಂತನೆಯಾಗುವಂತಹ ಈ ಆಯವ್ಯಯದ ಮೇಲೆ ಚರ್ಚೆಯಾಗುವ ಸಂದರ್ಭದಲ್ಲಿ, ಆಯವ್ಯಯ ಒಳ್ಳೆಯದೊ, ಕೆಟ್ಟದ್ದೊ, ವಿಚಾರಗಳು ವಿಶ್ಲೇಷಣೆಯಾಗಬೇಕೆಂದಾಗ ಅದನ್ನು ವಿಶ್ಲೇಷಣೆ ಮಾಡುವಂಥವರು ಸದನದಲ್ಲಿರಬೇಕು. ಇತ್ತೀಚಿನ ದಿನಗಳಲ್ಲಿ ಈ ಸರ್ಕಾರದ ವೈಖರಿ ಯಾವ ರೀತಿಯಾಗಿದೆ ಎಂದರೆ, ವಿರೋಧ ಪಕ್ಷದ ಕಡೆಯಿಂದ ಯಾವುದೇ ಒಂದು ವಿಚಾರದ ಬಗ್ಗೆ ಗಹನವಾದ ಚರ್ಚೆಯಾಗಲಿ ಗಣ್ಯವಾಗಿ ನೋಡುವುದು, ಅದರ ಬಗ್ಗೆ ಗಂಭೀರತೆಯನ್ನು ತೆಗೆದುಕೊಳ್ಳದಿರುವುದು, ಇವತ್ತು ಈ ಆಯವ್ಯಯದ ಆಗುಹೋಗುಗಳ ಬಗ್ಗೆ ಚರ್ಚೆಯಾಗಬೇಕು, ಇದಕ್ಕೆ ಉತ್ತರ ಕೊಡುವ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಅರ್ಥ ಮಂತ್ರಿಗಳು ಯಾವುದೇ ಸಾರ್ವಜನಿಕ ಮಹತ್ವದ ಬದಲಾವಣೆಯಾಗಬೇಕಾದರೆ ಅದಕ್ಕೆ ಒಪ್ಪಿಗೆಯನ್ನು ಸೂಚಿಸಬೇಕು, ಅದರ ಬಗ್ಗೆ ವಿಮರ್ಶೆಗಳು ನಡೆಯಬೇಕು. ಸೌಜನ್ಯಕ್ಕಾದರೂ ಆ ಒಂದು ವ್ಯವಸ್ಥೆಯನ್ನು ಮಾಡುವ ವಿಚಾರ ಇವತ್ತಿನ ಸರ್ಕಾರದಲ್ಲಿ ಇಲ್ಲದಿರುವುದು ತುಂಬಾ ವಿಷಾದನೀಯ. ನಾವು ಹಿಂದೆಯೇ ಪ್ರಸ್ತಾಪ ಮಾಡಿದೆವು, ಈ ಆಯವ್ಯಯವನ್ನು ಮಾರ್ಚ್ ತಿಂಗಳ ಕೊನೆಯ ಭಾಗದಲ್ಲಿ ಪ್ರಸ್ತಾಪ ಮಾಡುವುದಲ್ಲ. ಸಾಧಾರಣವಾಗಿ ಮಾರ್ಚ್ ತಿಂಗಳ ಎರಡು ಅಥವಾ ಮೂರನೇ